ಡಿ. ಜಿ. ಬಡಿಗೇರ



D.
G.
BADIGER

ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು

ಅನ್ನದಾನಿ ಹಿರೇಮಠ

ಲೇಖಕ ಅನ್ನದಾನಿ ಹಿರೇಮಠರು ಹೆಸರಾಂತ ಕವಿಗಳು, ಬರಹಗಾರರು ಹಾಗೂ ವಿಮರ್ಶಕರು. ಕಳೆದ ಮೂರು ವರುಷಗಳಿಂದ "ಕಲಾ ಪ್ರಪಂಚ" ಎಂಬ ಮಾಸ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿರುವ ಅನ್ನದಾನಿಯವರ ಕವನ ಸಂಗ್ರಹಗಳು ಸುಮಾರು. ೧೯೮೦ರಲ್ಲಿ ಬೆಳಕಿಗೆ ಬಂದ "ಅಭಿಮನ್ಯು" ಇವರ ಪ್ರಥಮ ಕವನ ಸಂಕಲನ.

ಕರ್ನಾಟಕ ವಿಶ್ವವಿದ್ಯಾಲಯದಿಂದ ಸಸ್ಯಶಾಸ್ತ್ರದಲ್ಲಿ ಎಂ.ಎಸ್ಸಿ., ಗಳಿಸಿರುವ (೧೯೭೭) ಅನ್ನದಾನಿಯವರ ಸಾಂಸ್ಕೃತಿಕ ಕ್ಷೇತ್ರ ಹಿರಿದು. ಸಾಹಿತ್ಯ ಅಲ್ಲದೇ, ಸಂಗೀತ, ನೃತ್ಯ, ನಾಟಕ ಹಾಗೂ ಚಿತ್ರಕಲೆಯಲ್ಲಿಯೂ ಇವರಿಗೆ ಅಭಿರುಚಿ. ಇವರ ಲೇಖನಗಳು ನಾಡಿನ ಸುಪ್ರಸಿದ್ಧ ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಗಿವೆ. ಇವರ ಕಥೆ ಮತ್ತು ಕವನಗಳು ಆಕಾಶವಾಣಿಯಿಂದಲೂ ಬಿತ್ತರಿಸಲ್ಪಟ್ಟಿವೆ. ಇವರ ವೈಜ್ಞಾನಿಕ ವಿಷಯಗಳನ್ನೊಳಗೊಂಡ ಭಾಷಣಗಳು ಅಷ್ಟೇ ಜನಪ್ರಿಯ. ಅನ್ನದಾನಿಯವರ "ಸಾಕ್ರೆಟಿಸ್" ಎಂಬ ನಾಟಕದ ನಿರ್ದೇಶನ ಇವರಿಗೆ ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆಯ "ಅತ್ಯುತ್ತಮ ನಿರ್ದೇಶಕ" ಪ್ರಶಸ್ತಿಯನ್ನು ಗಳಿಸಿಕೊಟ್ಟಿತು (೧೯೮೨).

ಪ್ರಸ್ತುತ, ಅನ್ನದಾನಿಯವರು ಗದುಗಿನ ಮುನಿಸಿಪಲ್ ಜೂನಿಯರ್ ಕಾಲೇಜಿನಲ್ಲಿ ಸಸ್ಯಶಾಸ್ತ್ರದ ಪ್ರಾಧ್ಯಾಪಕರು.

ಕರ್ನಾಟಕ ಕಲಾವಿದರು-5

ಡಿ. ಜಿ. ಬಡಿಗೇರ

ಅನ್ನದಾನಿ ಹಿರೇಮಠ

ಕರ್ನಾಟಕ ಲಲಿತಕಲಾ ಅಕಾಡೆಮಿ

ಬೆಂಗಳೂರು

D. G. BADIGER : A Biography by Annadani Hiremath published by Karnataka Lalitkala Academy, 14/3 Canara Finance Corporation Building, Nrupathunga Road, Bangalore-560 002

First Impression : 1983

Copies : 1000

General Editor : S. N. CHANDRASEKHAR

Price Rs. : 6-00

Printed by Ashwath Printers, 443, 44th Cross,
1st Main Road, 8th Block, Jayanagar, Bangalore-560 082



ಜನನ : ೧೯೦೨ ಮರಣ : ೧೯೬೭

ಮೊದಲ ಮಾತು :

ರಾಜ್ಯದ ಹಿರಿಯ ಕಲಾವಿದರನ್ನು ಕುರಿತ ಪುಸ್ತಕಗಳನ್ನು ಪ್ರಕಟಿಸ ಬೇಕೆಂದಿರುವ ಕರ್ನಾಟಕ ಲಲಿತಕಲಾ ಅಕಾಡೆಮಿಯ ಯೋಜನೆಯ ಮೊದಲ ಕಂತಿನಲ್ಲಿ ಈಗಾಗಲೇ ನಾಲ್ಕು ಕೃತಿಗಳು ಹೊರಬಂದಿವೆ. ಈ ಯೋಜನೆ ಜನಪ್ರಿಯವಾಗಿದ್ದು, ರಾಜ್ಯದ ಕಲೆಯ ವಿವಿಧ ಮುಖಗಳನ್ನು ಹಾಗು ಕಲಾವಿದರ ಪರಿಚಯ ಮಾಡಿಕೊಡುವ ದಿಸೆಯಲ್ಲಿ ಸಾಕಷ್ಟು ಫಲಕಾರಿಯಾಗಿದೆ.

ದಿವಂಗತ ಡಿ. ಜಿ. ಬಡಿಗೇರರನ್ನು ಕುರಿತ ಪ್ರಸ್ತುತ ಕೃತಿ ಈ ಯೋಜನೆಯ ಎರಡನೇ ಕಂತಿನಲ್ಲಿ ಮೊದಲ ಕೃತಿ. ಈ ಕಂತಿನಲ್ಲಿ ಇನ್ನೂ ಕೆಲವು ಕೃತಿಗಳು ಒಂದಾದ ಮೇಲೊಂದರಂತೆ ಪ್ರಕಟವಾಗುವ ಆಶ್ವಾಸನೆಯನ್ನು ಈ ಮೂಲಕ ತಿಳಿಸಲು ಹರ್ಷವೆನಿಸುತ್ತದೆ.

ಮೊದಲೇ ತಿಳಿಸಿದಂತೆ ಈ ಕೃತಿಗಳನ್ನು ಬರೆಯಲು ಆರಿಸಿರುವ ಬರಹಗಾರರು ಕಲೆಯ ಬಗ್ಗೆ, ಆಯಾ ಕಲಾವಿದರ ಜೀವನವನ್ನು ಕುರಿತು ಅರಿತವರು. ಈ ಪುಸ್ತಕಗಳಿಗೆ ಆರಿಸಿರುವ ಚಿತ್ರಗಳೂ, ಆಯಾ ಕಲಾವಿದರ ಕಲ್ಪನಾ ಸಾಮರ್ಥ್ಯದ ಪ್ರತೀಕ. ಅವು ಆಯಾ ಕಲಾವಿದರ ಕಲಾ ಸಂಪತ್ತಿನ ವ್ಯಾಪ್ತಿಯನ್ನು ಗುರುತಿಸಲು ಸಾಧನವಾಗುವುದರಲ್ಲಿ ಸಂದೇಹವಿಲ್ಲ.


ಈ ಮಾಲೆಯ ಸಂಪಾದಕತ್ವ ವಹಿಸಿರುವ ಶ್ರೀ ಎಸ್. ಎನ್. ಚಂದ್ರಶೇಖರ್ ಮತ್ತು ಅವರ ಸಮಿತಿಯ ಸದಸ್ಯರಾದ ಸರ್ವಶ್ರೀ ಆರ್. ಎಂ. ಹಡಪದ್, ಪಿ. ಆರ್. ತಿಪ್ಪೇಸ್ವಾಮಿ ಮತ್ತು ಎಂ. ಈ. ಗುರು ಅವರುಗಳಿಗೂ ಮತ್ತು ಗ್ರಂಥಕರ್ತರಿಗೂ ಅಕಾಡೆಮಿಯ ಪರವಾಗಿ ನನ್ನ ಹೃತ್ಪೂರ್ವಕ ವಂದನೆಗಳು.

ಕಲಾವಿದರು, ಕಲಾ ರಸಿಕರು ಮತ್ತು ಸಾಹಿತ್ಯಾಭಿಮಾನಿಗಳು ಅಕಾಡೆಮಿಯ ಈ ಸ್ತುತ್ಯ ಕಾರ್ಯವನ್ನು ಸಾರ್ಥಕಗೊಳಿಸುವತ್ತ ಪ್ರೋತ್ಸಾಹವೀಯುವರೆಂದು ಆಶಿಸೋಣ.

ಟಿ. ಪಿ. ಅಕ್ಕಿ

ಅಧ್ಯಕ್ಷ

ಕರ್ನಾಟಕ ಲಲಿತಕಲಾ ಅಕಾಡೆಮಿ



ಡಿ. ಜಿ. ಬಡಿಗೇರ

ಲಲಿತಕಲೆಯ ಭವ್ಯ ಪರಂಪರೆಯಲ್ಲಿ ಚಿತ್ರಕಲೆಯು ಭಾರತದ ಬಹು ದೊಡ್ಡ ಸಂಪತ್ತಾಗಿದೆ. ಭಾರತೀಯ ಕಲಾಪರಂಪರೆಯನ್ನು ಪ್ರತಿನಿಧಿಸಬಲ್ಲ ಅಧಿಕಾರ ಕರ್ನಾಟಕಕ್ಕೆ ಸಾಕಷ್ಟಿದೆ. ನಮ್ಮ ನಾಡಿನ ಕಲೆಯನ್ನು ಕುರಿತು ಅನ್ಯದೇಶದ ಕಲಾವಿದರು ಮೆಚ್ಚಿ ಅಭ್ಯಾಸ ನಡೆಸಿದಂತೆ, ಅನ್ಯದೇಶದ ಬಗೆಗೂ ನಮ್ಮ ಕಲಾವಿದರು ಅಭ್ಯಾಸ ನಡೆಸಿ ಆದರಿಂದ ಕಲೆಯ ಬಗೆಗಿನ ವಿಭಿನ್ನ ದೃಷ್ಟಿಕೋನಗಳನ್ನೂ,ತಮ್ಮ ಸ್ವಂತ ಬದುಕನ್ನೂ ಬೆಳೆಸಿಕೊಂಡುಬಂದಿದ್ದಾರೆ.

"ಇಂದ್ರಿಯಗಳನ್ನು ಕೆರಳಿಸುವುದು ಪಾಶ್ಚಿಮಾತ್ಯ ಚಿತ್ರಕಲೆಯ ಉದ್ದೇಶವಾದರೆ, ಕೆರಳಿದ ಇಂದ್ರಿಯಗಳನ್ನು ಶಾಂತಗೊಳಿಸುವುದು ಭಾರತೀಯ ಚಿತ್ರಕಲೆಯ ಉದ್ದೇಶ" ಎಂದು ತ. ರಾ. ಸು. ಅವರು ಹೇಳಿದ ಮಾತು ಇಲ್ಲಿ ಸ್ಮರಣೀಯ. ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸ ಮಾಡಿ ಅಲ್ಲಿಯ ಶೈಲಿ ಹಾಗೂ ಭಾರತೀಯ ಪರಂಪರೆ-ಎರಡನ್ನೂ ತಮ್ಮ ಚಿತ್ರಗಳ ಮೂಲಕ ನೋಡಿ ಆದನ್ನು ಮುಕ್ತವಾಗಿ ಸಮನ್ವಯ ದೃಷ್ಟಿಕೋನದಿಂದ ಅಭಿವ್ಯಕ್ತ ಪಡಿಸಿದ ಕೀರ್ತಿ ಡಿ. ಜಿ. ಬಡಿಗೇರರದು.

ಭಾರತದಿಂದ ಪ್ರಪ್ರಥಮವಾಗಿ ಲಂಡನ್ನಿನ ರಾಯಲ್ ಅಕಾಡೆಮಿ ಆಫ್ ಆರ್ಟ್‌ದಲ್ಲಿ ಪ್ರವೇಶ ಪಡೆದು ಅಲ್ಲಿಂದ ಪದವಿಯನ್ನು ಗಳಿಸಿಕೊಂಡು ಬಂದವರಲ್ಲಿ ಬಡಿಗೇರರು ಮೊದಲಿಗರು. ಲಂಡನ್ನಿನಿಂದ ಬಂದ ನಂತರ ಆಗಿನ ವಿಶಾಲ ಮುಂಬಯಿ ಪ್ರಾಂತಕ್ಕೆ ಆರ್ಟ ಹಾಗೂ ಕ್ರ್ಯಾಫ್ಟನ ಇನ್‌ಸ್ಪೆಕ್ಟರರಾಗಿ ಮೂರು ದಶಕಗಳ ಕಾಲ ಕಲಾರಂಗಕ್ಕೆ ಸಲ್ಲಿಸಿದ ಅವರ ಸೇವೆ ತುಂಬಾ ಗಣನೀಯ.

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನಲ್ಲಿ ಒಂದು ಸಣ್ಣ ಹಳ್ಳಿ ಮಿಶ್ರಿಕೋಟಿ ಬಡಿಗೇರರ ಜನ್ಮಸ್ಥಳ. ಅಲ್ಲಿ ಬಡಿಗತನದ ಕೆಲಸ ಮಾಡುತ್ತಿದ್ದ ಒಂದು ಬಡ ಕುಟುಂಬದಲ್ಲಿ ಜನನ. ಬಡಿಗತನವನ್ನು ಬಹು ನಿಷ್ಠೆಯಿಂದ ಮಾಡುತ್ತ ಬಂದ ಆ ಮನೆಯ ಯಜಮಾನ ಶ್ರೀ ಗೂಳಪ್ಪ ಬಡಿಗೇರ ಬಹು ನಿಷ್ಣಾತ ವ್ಯಕ್ತಿ. ಕಲಾದೃಷ್ಟಿಯಿಂದ ಕೆತ್ತಲ್ಪಡುವ ಶ್ರೀಗಂಧದ ಕಟ್ಟಿಗೆ ಆತನ ಕುಶಲ ಹಸ್ತಗಳಲ್ಲಿ ಮೇಣದಂತೆ ಮೃದುವಾಗಿ ಮಣಿಯುತ್ತಿತ್ತು. ಊರೂರಿಗೆಲ್ಲ ಕಟ್ಟಿಗೆಯ ಭರ್ಜರಿ ತೇರು, ಪಲ್ಲಕ್ಕಿ, ಕುಸುರಿಗೆಲಸದ ಚೌಕಟ್ಟಿನ ಬಾಗಿಲುಗಳು, ತಾಮ್ರ,ಹಿತ್ತಾಳೆಯ ಕೆಲಸ ಮಾಡುವುದರಲ್ಲಿ ಸಿದ್ಧಹಸ್ತರೆನಿಸಿ ಕೊಂಡ ಗೂಳಪ್ಪನವರಿಗೆ ಎರಡನೆಯ ಮಗನಾಗಿ ದೇವಪ್ಪ ೧೯೦೨ರಲ್ಲಿ ಜನಿಸಿದರು. ದೇವಪ್ಪರಲ್ಲಿ ಈ ಕಲಾಪ್ರಜ್ಞೆ ಅನುವಂಶಿಕವಾಗಿ, ರಕ್ತಗತವಾಗಿ ಹರಿದು ಬಂದಿತ್ತು.

ಮೊಳಕೆಯಲ್ಲಿಯೇ ಪ್ರದರ್ಶಿತ

ಹಳೆಯ ಮೈಸೂರಿನ ದೇವಾಲಯಕ್ಕಾಗಿ ಗೂಳಪ್ಪನವರಿಗೆ ಒಮ್ಮೆ ಕಟ್ಟಿಗೆಯ ತೇರೊಂದನ್ನು ನಿರ್ಮಿಸುವ ಕೆಲಸ ಬಂತು. ಅದನ್ನು ಆರಂಭಿಸಿದ ಮೇಲೆ ಅದರಲ್ಲೇ ಮಗ್ನರಾಗಿ ಬಹು ನಿಷ್ಠೆಯಿಂದ ಕೆಲಸ ನಡೆಸಿದರು. ಏಳೆಂಟು ವರ್ಷದ ದೇವಪ್ಪನಿಗೆ ತಂದೆ ಮಾಡುವ ಕೆಲಸದಲ್ಲಿ ಅತ್ಯಂತ ಆಸಕ್ತಿ. ತದೇಕಚಿತ್ತನಾಗಿ ತಾಸುಗಟ್ಟಲೆ ಕುಳಿತು ನೋಡುವುದು ಹವ್ಯಾಸವಾಗಿ ಬೆಳೆಯಿತು ಈ ಮಗನಿಗೆ. ಈ ಆಸಕ್ತಿಯನ್ನು ಸೂಕ್ಷ್ಮವಾಗಿ ಗ್ರಹಿಸಿದ ತಂದೆ ಮುಂದೆ ಕ್ರಮೇಣ ತೇರಿಗೆ ಬೇಕಾದ ಸಿಂಹಗಳನ್ನು ಮಾಡಲು ಮಗನಿಗೇ

ವಹಿಸಿದ. ಮಗ ಪ್ರಥಮದಲ್ಲಿಯೇ ಸುಂದರವಾಗಿ ಕೆತ್ತಿದ. ಹೀಗೆ ತಂದೆಯೇ ಮಗನ ಪ್ರಥಮ ಗುರುವಾದರು. ಮಗನ ಮುಂದಿನ ಬೆಳವಣಿಗೆ ಮೊಳಕೆಯಲ್ಲಿಯೇ ಪ್ರದರ್ಶಿತವಾಯಿತು.

ದೇವಪ್ಪನ ಪ್ರಾಥಮಿಕ ಶಿಕ್ಷಣ ಮಿಶ್ರಿಕೋಟೆಯಲ್ಲಿಯೇ ಮುಗಿಯಿತು. ಮಾಧ್ಯಮಿಕ ಶಿಕ್ಷಣಕ್ಕಾಗಿ ಸಮೀಪದ ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಸ್ಕೂಲ್‌ಗೆ ಬಂದರು. ಬೀಜದಲ್ಲಿ ಗಿಡವಿರುವ ಸುಪ್ತಚೇತನವನ್ನು ಅಲ್ಲಿ ಗುರುತಿಸಿದವರೆಂದರೆ ಸ್ಕೂಲಿನ ಮುಖ್ಯಾಧ್ಯಾಪಕ ತೊರವಿಯವರು. ಎಂಟನೆ ಇಯತ್ತೆಯಲ್ಲಿಯೇ ಎಲಿಮೆಂಟರಿ ಡ್ರಾಯಿಂಗ ಹಾಗೂ ಇಂಟರಮಿಡಿಯೇಟ ಗ್ರೇಡ್ ಪರೀಕ್ಷೆಗಳಲ್ಲಿ ದೇವಪ್ಪ ತೇರ್ಗಡೆಯಾದರು. ಹುಡುಗನ ಪ್ರತಿಭೆಯನ್ನು ನೋಡಿ ೧೯೨೩ ರಲ್ಲಿ ಮುಂಬಯಿಯ ಸರ್ ಜೆ. ಜೆ. ಸ್ಕೂಲ ಆಫ್ ಆರ್ಟಗೆ ಹೋಗಲು ತೊರವಿಯವರು ಹಾಗೂ ಡ್ರಾಯಿಂಗ ಶಿಕ್ಷಕರಾದ ಮನಿಯಾರರು ಪ್ರೋತ್ಸಾಹಿಸಿದರು. ಮುಂಬಯಿಯಲ್ಲಿ ಶಾಬೋಜಿಯೆಂಬ ವ್ಯಾಪಾರಸ್ಥರ ಮನೆಯಲ್ಲಿ ಇರಲು ಅನುಕೂಲಕರ ವ್ಯವಸ್ಥೆಯನ್ನೂ ಅವರು ಮಾಡಿಕೊಟ್ಟರು. ಅನಂತರ ಮುಂದೆ ಶಂಕರಪ್ಪ ಢಡ್ಡ ಎನ್ನುವವರೂ ಅಲ್ಲಿ ಬಡಿಗೇರರಿಗೆ ಆಶ್ರಯ ನೀಡಿದರು.

ಕಲಾಭಿಜ್ಞತೆ ಹಾಗೂ ಕಲಾಸೃಷ್ಟಿಯ ವಿಕಾಸಕ್ಕೆ ವಿಪುಲ ಅವಕಾಶ ಈ ಅವಧಿಯಲ್ಲಿ ದೇವಪ್ಪನಿಗೆ ದೊರೆಯಿತು. ಆತನ ಆದರ್ಶ ಗುಣಗಳ ಮುಗ್ಧ ಪ್ರತಿಭೆಗೆ ಪ್ರತಿಯಾಗಿ ಪ್ರಿನ್ಸಿಪಾಲ ಗ್ಲ್ಯಾಡಸ್ಟನ್ ಸೊಲೋಮನ್ನರಂತಹ ಗುರುವಿನ ಮಾರ್ಗದರ್ಶನವೂ ದೊರೆಯಿತು. ಸಂಸ್ಕಾರದ ಗುಣ, ಸುತ್ತಲಿನ ಅನುಕೂಲಕರ ಪರಿಸರ ಎರಡೂ ವಿಪುಲವಾಗಿ ಸಿಕ್ಕಾಗ ಫಲವತ್ತಾಗಿ ಬೆಳೆಯುವ ಮರದಂತೆ ಆತನ ವಿದ್ಯಾರ್ಥಿ ಜೀವನ ವಿಕಸನ ಹೊಂದುತ್ತ ಬಂತು. ತನ್ನ ಪ್ರಾಮಾಣಿಕ ಪರಿಶ್ರಮಗಳಿಂದಲೂ ದೇವಪ್ಪ ತನ್ನ ವಿದ್ಯಾರ್ಥಿ ಜೀವನದ ಕೊನೆಯವರೆಗೂ ಉಚ್ಚ ಕಲಾ ಪರೀಕ್ಷೆಗಳಲ್ಲಿ ಉಚ್ಚಮಟ್ಟವನ್ನು ಕಾಯ್ದುಕೊಂಡು ಬಂದರು. ೧೯೨೭ ರಲ್ಲಿ ಡ್ರಾಯಿಂಗ ಮತ್ತು ಪೇಂಟಿಂಗ ಡಿಪ್ಲೊಮಾ ಪದವಿಯನ್ನು ರ್‍ಯಾಂಕನಿಂದ ಪಾಸಾಗಿ 'ಡಾಲಿಕರ್ಸ ಸೇಠಜಿ' ಪ್ರೈಜ್ ಹಾಗೂ ಸುವರ್ಣ ಪದಕವನ್ನು ಪಡೆದರು.

ಈ ಮಧ್ಯದ ಅವಧಿಯಲ್ಲಿಯೇ ಮೇಯೋ ಪದಕ, ಡಿಪ್ಲೊಮಾ ಪದಕ, ರಾಜ್ಯಪಾಲರ ವಿಶೇಷ ಪಾರಿತೋಷಕ ಮುಂತಾದ ಪ್ರಶಸ್ತಿಗಳೂ ದೇವಪ್ಪನವರನ್ನು ಹುಡುಕಿಕೊಂಡು ಬಂದವು. ಈ ಸಂಗತಿ ಆ ವರ್ಷದ ಜೆ. ಜೆ. ಸ್ಕೂಲ ಆಫ್ ಆರ್ಟದ 'ವರದಿ-ಪುಸ್ತಕ'ದಲ್ಲಿ ಪ್ರಶಂಸನೀಯವಾಗಿ ಪ್ರಕಟವಾಯಿತು. ಆರುವರ್ಷಗಳ ಕಾಲ ಅಲ್ಲಿ ಅಭ್ಯಾಸ ಮಾಡಿದ ನಂತರ ೧೯೨೮ರಲ್ಲಿ ಬಡಿಗೇರ ಆ ಸಂಸ್ಥೆಯ 'ಫೆಲೋ' ಆಗಿ ಆಯ್ಕೆಯಾದರು. ಮೊದಲಿಗೆ ಕೇವಲ ೧೦ ರೂಪಾಯಿಗಳ ಗೌರವಧನ ಪಡೆದ ದೇವಪ್ಪನವರು ಈಗ ಫೆಲೋ ಆಗಿ ೪೦ ರೂಪಾಯಿಗಳ ವೇತನ ಪಡೆಯಲಾರಂಭಿಸಿದರು. ಅವರ ಪ್ರತಿಭೆಯ ಬಗೆಗೆ ಪ್ರಿನ್ಸಿಪಾಲ ಸೊಲೋಮನ್ನರಿಗಂತೂ ಹಿಡಿಸಲಾರದಷ್ಟು ಖುಷಿ.

ದಿಲ್ಲಿಯ ವೈಸರೀಗಲ್ ಲಾಜ್ (ಇಂದಿನ ರಾಷ್ಟ್ರಪತಿಭವನ) ದಲ್ಲಿಯ ಗೋಡೆಗಳ ಮೇಲೆ ಚಿತ್ರಗಳನ್ನು ಬಿಡಿಸಲು ಒಮ್ಮೆ ಸೊಲೊಮನ್ನರಿಗೆ ಕರೆ ಬಂತು. ದೇವಪ್ಪನವರ ಕಲಾ ನೈಪುಣ್ಯತೆಯನ್ನು ಕಂಡಿದ್ದ ಸೋಲೋಮನ್ ತಮ್ಮ ಪಾಲಿನ ಆ ವಿಶ್ವಾಸದ ಕೆಲಸವನ್ನು ಮಾಡಲು ಇವರಿಗೇ ವಹಿಸಿ ಕೊಟ್ಟರು. ಅಲ್ಲಿ ದೇವಪ್ಪನವರ ಕಲಾ ಕೆಲಸವನ್ನು ದೇಶವಿದೇಶಗಳಿಂದ ಬಂದ ಕಲಾತಜ್ಞರೆಲ್ಲ ನೋಡಿ ಸಂತೋಷಪಟ್ಟು ಮೆಚ್ಚಿಗೆ ವ್ಯಕ್ತಪಡಿಸಿದರು.

ಲಂಡನ್ನಿಗೆ

ವಿದೇಶದ ಕಲೆ ಹಾಗೂ ಕಲಾವಿದರ ಬಗೆಗೆ ಆಗೀಗ ಸಾಕಷ್ಟು ಓದುತ್ತಿದ್ದ ಬಡಿಗೇರ ಒಂದು ಸಂಜೆ ಸಮುದ್ರದ ದಂಡೆಯ ಮೇಲೆ ಕುಳಿತು ಗೆಳೆಯರೊಂದಿಗೆ ಮಾತನಾಡುತ್ತಿರುವಂತೆಯೇ ತನಗೂ ಇಂಗ್ಲೆಂಡಿನ ಒಳ್ಳೆಯ ಮಹಾವಿದ್ಯಾಲಯಕ್ಕೆ ಹೋಗಿ ಕಲಿಯಬೇಕೆಂಬ ಉತ್ಕಟೇಚ್ಛೆ ಬೆಳೆಯಿತು. ಆ ಬಗೆಗೆ ಗುರು ಸೊಲೋಮನ್ನರನ್ನು ವಿಚಾರಿಸಿದಾಗ ಸಂತೋಷಪಟ್ಟು ಅವರನ್ನು ಇಂಗ್ಲೆಂಡಿನ ರಾಯಲ್ ಅಕಾಡೆಮಿ ಆಫ್ ಆರ್ಟ್ಸಗೆ ಕಳಿಸುವ ವಿಚಾರ ಮಾಡಿದರು. ಈ ವಿಷಯವನ್ನು ಅವರ ತಂದೆಯವರಿಗೂ ತಿಳಿಸಲಾಯಿತು. ಗೂಳಪ್ಪನವರಿಗೂ ಈ ಸುದ್ದಿ ಕೇಳಿ ಸಂತೋಷವಾಯಿತು.

ಮನೆಯುಲ್ಲಿಯ ಅಲ್ಪಸ್ವಲ್ಪ ಬಂಗಾರದ ಒಡವೆಗಳನ್ನೆಲ್ಲ ಮಾರಿ ಮಗನನ್ನು ಇಂಗ್ಲೆಂಡಿಗೆ ಕಳಿಸಲು ಮನಸ್ಸು ಮಾಡಿದರು. ೧೯೨೯ರಲ್ಲಿ ದೇವಪ್ಪನವರಿಗೆ ಇಂಗ್ಲೆಂಡಿಗೆ ತೆರಳುವ ಯೋಗ ಒದಗಿ ಬಂತು. ಶಿರಸಂಗಿ ದೇಸಾಯಿ ಟ್ರಸ್ಟಿನಿಂದ ಲಿಂಗಾಯತ ಫಂಡಿನ ಧನಸಹಾಯವೂ ಅವರಿಗೆ ದೊರೆಯಿತು. ಹಾವೇರಿ ಹಿರೇಮಠದ ವಕೀಲರು, ಹುಬ್ಬಳ್ಳಿಯ ವಾಲಿ ಶಿವಪ್ಪಣ್ಣನವರು, ನೀಲಿ ಬಸೆಟ್ಟೆಪ್ಪನವರು ದೇವಪ್ಪನವರನ್ನು ವಿದೇಶಕ್ಕೆ ಕಳಿಸಲು ಪ್ರೋತ್ಸಾಹ ನೀಡಿದರು. ಭಾರತದಿಂದ ಲಂಡನ್ನಿಗೆ ಕಲಾ ಅಭ್ಯಾಸ ಕೈಗೊಳ್ಳಲು ಹೋದವರಲ್ಲಿ ಬಡಿಗೇರರು ಮೊಟ್ಟ ಮೊದಲನೆಯವರು.

ಆದರೆ ಲಂಡನ್ನಿಗೆ ತೆರಳಿದೊಡನೆ ದೇವಪ್ಪನವರಿಗೆ ಅಲ್ಲಿಯ ಕಲಾ ಶಾಲೆಯಲ್ಲಿ ಒಮ್ಮೆಲೇ ಪ್ರವೇಶ ಸಿಕ್ಕಲಿಲ್ಲ. ಅಲ್ಲಿ ಪ್ರವೇಶ ಸಿಕ್ಕುವದು ಬಹಳ ದುಷ್ಕರವಾಗಿತ್ತು. ಹಲವು ತಿಂಗಳುಗಳ ಕಾಲ ಬೇರೆ ಬೇರೆ ಸಂಸ್ಥೆ ಗಳಲ್ಲಿ ಕೆಲಸ ಮಾಡಿ ಕಳೆದರು. ಅಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಯು ಬಹು ಉಚ್ಚಮಟ್ಟದ ಕಲಾ ಸಾಧನೆ ಮಾಡಿದವನಾಗಿರಬೇಕಲ್ಲದೆ, ಅದಕ್ಕೆ ನಿರ್ದಿಷ್ಟ ವಯುಸ್ಸಿನ ನಿರ್ಬಂಧವನ್ನೂ ವಿಧಿಸಲಾಗಿತ್ತು. ಶಾಲೆ ಕಲಿಯು ವಾಗ ತಂದೆ ವಯುಸ್ಸನ್ನು ಹೆಚ್ಚು ಹಚ್ಚಿದ್ದರಿಂದ ಆ ವಯೋಮಿತಿಯನ್ನು ದೇವಪ್ಪನವರು ಆಗಲೇ ದಾಟಿದ್ದರು. ಒಮ್ಮೆ ಲಂಡನ್ನಿನ ಯೂನಿವರ್ಸಿಟಿ ಕಾಲೇಜಿನ ಅಂಗಸಂಸ್ಥೆಯಾದ ಸ್ಲೇಡ ಸ್ಕೂಲ ಆಫ್ ಆರ್ಟಿನಲ್ಲಿ ರಾಯಲ್ ಕಾಲೇಜಿನ ಪ್ರಿನ್ಸಿಪಾಲರಾದ ಸರ್ ವಿಲಿಯಂ ರೊಡೆನ್‌ಸ್ಟೀನ್‌ರನ್ನು ಅಕ ಸ್ಮಾತ್ತಾಗಿ ಕಾಣುವ ಅವಕಾಶ ಸಿಕ್ಕಿತು. ದೇವಪ್ಪ ತಮ್ಮ ಹಲವಾರು ಕಲಾ ಕೃತಿಗಳನ್ನು, ದೊರೆತ ಪ್ರಶಸ್ತಿಗಳನ್ನು ಹಾಗೂ ಸೊಲೋಮನ್ನರು ಕೊಟ್ಟ ಪತ್ರವನ್ನೂ ಅವರ ಬಳಿ ಒಯ್ದು ತೋರಿಸಿದರು. ಅವುಗಳ ಬಗ್ಗೆ ಹಾಗೂ ಮುಂಬಯಿಯ ಜೆ. ಜೆ. ಸ್ಕೂಲಿನ ಉಚ್ಚಕಲಾ ಶಿಕ್ಷಣ ಮಟ್ಟದ ಬಗ್ಗೆ ಸರ್ ವಿಲಿಯಮ್ ಅವರಿಗೆ ಬಹಳ ಮೆಚ್ಚಿಗೆ ಎನಿಸಿತು. ಅವರು ಬಡಿಗೇರರನ್ನು ಅಕಾಡೆಮಿಯ ದೊಡ್ಡ ದೊಡ್ಡ ಕಲಾ ಶಿಕ್ಷಕರನೇಕರಿಗೆ ಅವರ ಕಲಾಕೃತಿಗಳ ಮೂಲಕ ಪರಿಚಯ ಮಾಡಿಕೊಟ್ಟರು. ರಸೆಲ್, ಕೆಲ್ಲಿ, ಜಾಕ್ಸನ್, ಮಾರ್ನಿಂಗ್ಟನ್ ಮುಂತಾದ ಶ್ರೇಷ್ಠ ಚಿತ್ರಕಲಾವಿದರಿಂದ ಕೂಡಿದ್ದ ಅಕಾ

ಡೆಮಿಯ ಕೌನ್ಸಿಲ್‌ನ್ನು ಕಂಡು ಈ ಅಕಾಡೆಮಿಯಲ್ಲಿ ತಮಗೆ ಪ್ರವೇಶ ಸಿಕ್ಕು ವುದೇ ಅಸಾಧ್ಯವೆಂದು ನಂಬಿದರು. ಬಹು ನಿರಾಶೆಯಿಂದಲೇ ಎಲ್ಲರನ್ನೂ ಪ್ರವೇಶಕ್ಕಾಗಿ ಕೇಳಿಕೊಂಡರು. ಬಡಿಗೇರ ಅವರ ಸಾಧನೆಯನ್ನು, ಕಲೆಯನ್ನು ಹಾಗೂ ಕಲಿಯಬೇಕೆನ್ನುವ ಲವಲವಿಕೆಯನ್ನು ಕಂಡ ಹಿರಿಯ ಕಲಾಕಾರರೆಲ್ಲ ತಲೆದೂಗಿದರು. ಆದರೆ ವಯಸ್ಸಿನ ನಿರ್ಬಂಧವೊಂದು ಪ್ರವೇಶಕ್ಕೆ ಅಡ್ಡಿ ಬಂದಿತು. ಬಂದ ದಾರಿಗೆ ಸುಂಕವಿಲ್ಲವೆಂದು ಹತಾಶರಾಗಿ ಬಡಿಗೇರರು ತಮ್ಮ ವಸತಿಗೆ ತೆರಳಿದರು. ಆದರೆ ಮುಂದೊಂದೆರಡು ದಿನಗಳಲ್ಲಿಯೇ ರಾಯಲ್ ಅಕಾಡೆಮಿಯಿಂದ ಕರೆಬಂದಾಗ ನಂಬುವುದೇ ಅಸಾಧ್ಯವೆನಿಸುವಷ್ಟು ಸಂತೋಷ ವಾಯ್ತು. ವಯೋಮಿತಿ ಮೀರಿದ್ದರಿಂದ ಅಕಾಡೆಮಿಯು ಬಡಿಗೇರರಿಗೆ ಪಾರಿತೋಷಕ ಅಥವಾ ವಿದ್ಯಾರ್ಥಿವೇತನಗಳು ದೊರಕಲಾಗುವುದಿಲ್ಲ ಎಂಬ ನಿರ್ಬಂಧದೊಂದಿಗೆ ಉಳಿದೆಲ್ಲ ನಿಯಮಗಳನ್ನು ಸಡಿಲಿಸಿ ಪ್ರವೇಶ ನೀಡಿತ್ತು. ಅವಕಾಶ ಸಿಕ್ಕಿದುದೇ ತನ್ನ ಪುಣ್ಯವೆಂದು ಭಾವಿಸಿದ ಬಡಿಗೇರರಿಗೆ ಪಾರಿ ತೋಷಕ, ವಿದ್ಯಾರ್ಥಿ ವೇತನಗಳಂತಹವೆಲ್ಲ ಗೌಣವೆನಿಸಿದವು. ಪಾಶ್ಚಾತ್ಯ ಶೈಲಿಯ ಚಿತ್ರಕಲೆಯನ್ನು ಅದರ ತಾಯ್ನಾಡಿನಲ್ಲೇ ಅಭ್ಯಾಸ ಮಾಡುವ ಯೋಗ ಒದಗಿ ಬಂತು. ಅದರ ಸದುಪಯೋಗವನ್ನು ತನ್ನ ಸಂಸ್ಕಾರ ಹಾಗೂ ಪರಿಶ್ರಮದ ಬಲದಿಂದ ಪೌರ್ವಾತ್ಯ ಕಲೆಯನ್ನು ಕರಗತ ಮಾಡಿ ಕೊಂಡಂತಹ ಕೈಗಳಿಗೆ ದೊರೆತುದು ಅವರಿಗೆ ಅಪರಿಮಿತ ಆನಂದವನ್ನು ಉಂಟುಮಾಡಿತು. ಆಧುನಿಕ ಕಲೆಯನ್ನು ಇನ್ನೂ ಹೊಸ ದೃಷ್ಟಿಕೋನ ದಿಂದ ನೋಡುವ, ತಿಳಿದುಕೊಳ್ಳುವ ಪ್ರಜ್ಞೆ ಅವರಲ್ಲಿ ಬೆಳೆಯಿತು. ಎರಡು ವರ್ಷಗಳ ಕಾಲ ಲಂಡನ್ನಿನಲ್ಲಿ ಅಭ್ಯಾಸ ನಡೆಸಿ 'ಗ್ರಾಜ್ಯುಯೇಟ್ ಆಫ್ ರಾಯಲ್ ಅಕಾಡೆಮಿ ಆಫ್ ಆರ್ಟ್' (G. R. A. London) ಪದವಿ ಯನ್ನು ೧೯೩೧ ರಲ್ಲಿ ಪಡೆದುಕೊಂಡರು. ಭಾರತದಿಂದ ಲಂಡನ್ನಿನಲ್ಲಿ ಪ್ರವೇಶ ಪಡೆದು ಈ ಪದವಿಯನ್ನು ಪ್ರಪ್ರಥಮವಾಗಿ ಗಳಿಸಿ ಕೊಂಡ ಶ್ರೇಯಸ್ಸು ಶ್ರೀ ಬಡಿಗೇರರದ್ದು.

ಮಹತ್ವಾಕಾಂಕ್ಷೆ

ಲಂಡನ್ನಿನಲ್ಲಿ ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಯಾವ ವಿದ್ಯಾರ್ಥಿ ವೇತನ, ಪಾರಿತೋಷಕವನ್ನೂ ಪಡೆಯದಂತಹ ಸ್ಥಿತಿ ಬಂದೊದ

ಗಿದ್ದುದು ಮನಸ್ಸಿನಲ್ಲಿ ಕಟಿಯುತ್ತಿದ್ದರೂ ಆ ಶ್ರೇಯಸ್ಸನ್ನು ಮುಂದೆ ಇನ್ನಾವದೋ ರೀತಿಯಲ್ಲಿ ಪಡೆಯಬಲ್ಲೆನೆಂಬ ಮಹತ್ವಾಕಾಂಕ್ಷೆ ಮಾತ್ರ ದೇವಪ್ಪನವರಿಗಿತ್ತು. ೧೯೩೦ನೇ ಇಸ್ವಿಯಲ್ಲಿ ಲಂಡನ್ನಿನಲ್ಲಿಯೇ ಇದ್ದಾಗ ಸುಮಾರು ಮುನ್ನೂರು ಚಿತ್ರಗಳ 'ಏಕವ್ಯಕ್ತಿ' ಕಲಾಪ್ರದರ್ಶನವೊಂದನ್ನು ಲಂಡನ್ನಿನ ಬ್ಲೂಮ್ಸಬರಿ ಗ್ಯಾಲರಿಯಲ್ಲಿ ಏರ್ಪಡಿಸಿದ್ದರು. ಅದರ ಉದ್ಘಾಟನೆಗೆ ದುಂಡು ಮೇಜಿನ ಪರಿಷತ್ತಿಗಾಗಿ ಲಂಡನ್ನಿಗೆ ಆಗಮಿಸಿದ್ದ ಮಹಾತ್ಮಾ ಗಾಂಧೀಜಿಯವರನ್ನು ಆಮಂತ್ರಿಸಿದರು. ಆದರೆ ಕಾರ್ಯ ಬಾಹುಳ್ಯದಿಂದ ಬರಲಾಗದ್ದಕ್ಕೆ ವಿಷಾದಿಸಿ ಗಾಂಧೀಜಿ ಶುಭಸಂದೇಶವೊಂದನ್ನು ಮಾತ್ರ ಕಳಿಸಿದರು. ಕೂಡಲೇ ಬಡಿಗೇರ ಅವರು ಅಂತರರಾಷ್ಟ್ರೀಯ ಖ್ಯಾತ ಕವಿ ರುದಿಯಾರ್ಡ್ ಕಿಪ್ಲಿಂಗ್ ಅವರನ್ನು ಆಮಂತ್ರಿಸಿದರು. ಆದದ್ದೆಲ್ಲಾ ಒಳಿತಿಗೇ ಎನ್ನುವಂತೆ ಬಡಿಗೇರ ಅವರ ಪ್ರಸಿದ್ಧಿ ಆಗಲೇ ಇಮ್ಮಡಿಯಾದದ್ದು. ಲಂಡನ್ನಿನ ಪ್ರಮುಖ ಪತ್ರಿಕೆಗಳಲ್ಲೆಲ್ಲಾ ಭಾರೀ ಪ್ರಶಂಸೆಯನ್ನು ಗಳಿಸಿಕೊಂಡರು.

East is East and West is West
The twain shall never meet.

("ಪೂರ್ವ ಎಂದರೆ ಪೂರ್ವ, ಪಶ್ಚಿಮ ಎಂದರೆ ಪಶ್ಚಿಮ ಎರಡೂ ಎಂದೂ ಒಂದುಗೂಡವು") ಎಂದು ಹಾಡಿದ ಪ್ರಸಿದ್ಧ ಆಂಗ್ಲಕವಿ ರುದಿಯಾರ್ಡರು ಇವರ ಕಲಾಕೃತಿಗಳನ್ನು ವೀಕ್ಷಿಸಿ "ಪೌರ್ವಾತ್ಯ ಕಲೆಯ ಪ್ರಭಾವವಿರುವ ಬಡಿಗೇರ ಪಾಶ್ಚಿಮಾತ್ಯ ದೃಷ್ಟಿಕೋನವನ್ನೂ ಬೆಳೆಸಿಕೊಂಡು ತನ್ನ ಆ ಕಲಾಕೃತಿಗಳಲ್ಲಿ ಸಮನ್ವಯತೆಯನ್ನು ತಂದು ಕಲೆಯಲ್ಲಿ ಒಂದು ಹೊಸ ಮನ್ವಂತರವನ್ನೇ ಉಂಟು ಮಾಡಿದ್ದಾರೆ" ಎಂಬುದಾಗಿ ಮುಕ್ತ ಕಂಠದಿಂದ ಹೊಗಳಿದರು. ಭಾರತೀಯ ದೈವಿಕತೆ ಹಾಗೂ ಪಾಶ್ಚಿಮಾತ್ಯ ಶೃಂಗಾರದ ಸೌಂದರ್ಯಾರಾಧನೆಯನ್ನು ಕಂಡ ಕವಿ – "ಪೂರ್ವ ಪಶ್ಚಿಮಗಳಲ್ಲಿಯ ಅಂತರ ಬರೀ ತೋರಿಕೆಗೆ ಮಾತ್ರ. ಅವೆರಡೂ ಇಲ್ಲಿ ಒಂದುಗೂಡಿವೆ" ಎಂಬ ತಮ್ಮ ಕವನದ ಬದಲಾವಣೆಯನ್ನು ಬಡಿಗೇರರ ಕಲಾಕೃತಿಗಳಿಂದ ಕಂಡುಕೊಳ್ಳಬೇಕಾಯಿತು.

ಇಪ್ಪತ್ತೈದರ ತಾರುಣ್ಯದಲ್ಲಿಯೇ ಇಂಥ ಕಲಾ ಪ್ರದರ್ಶನವೊಂದನ್ನು ಪ್ರದರ್ಶಿಸಿ ಪಾಶ್ಚಾತ್ಯರ ಕಲ್ಪನೆಯನ್ನಿಂತು ಸೂರೆಗೊಂಡ ಈ ಕಲಾವಿದ ಕನ್ನಡದ ನೆಲದ ಮೇಲೆಯೇ ಹುಟ್ಟಿದವರು ಎಂದು ಹೆಮ್ಮೆಯಿಂದ ಹೇಳು ವಾಗಲೆಲ್ಲ ರೋಮಾಂಚನ ಎನಿಸುತ್ತದೆ. ಈ ಪ್ರದರ್ಶನದಿಂದ ಮೋಹಿತ ನಾದ ಒಬ್ಬ ಭಾರತೀಯ ಸಂಸ್ಥಾನಿಕ ತನ್ನ ಅರಮನೆಯ ಗೋಡೆಗಳ ಮೇಲೆ ತೈಲವರ್ಣದಲ್ಲಿ ಚಿತ್ರಗಳನ್ನು ಚಿತ್ರಿಸಲು ಬಡಿಗೇರರನ್ನು ಕೇಳಿ ಒಪ್ಪಿಸಿದರು. ಲಂಡನ್ನಿನ ಇಂಡಿಯಾ ಹೌಸ್‌ನಲ್ಲಿ ಏರ್ಪಡಿಸಿದ ಏಕವ್ಯಕ್ತಿ ಕಲಾಪ್ರದರ್ಶನ ದಲ್ಲಿ ಬಡಿಗೇರರ ಎಷ್ಟೋ ಕೃತಿಗಳು ಮಾರಲ್ಪಟ್ಟವು. 'ಕ್ರಿಯೇಶನ್ ಆಫ್ ತಿಲೋತ್ತಮೆ' (ತಿಲೋತ್ತಮೆಯ ಸೃಷ್ಟಿ) ಎಂಬ ಚಿತ್ರವಂತೂ ಅಲ್ಲಿಯ ಹೆಸರಾಂತ ಕಲಾವಿದರೆಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಇಂಗ್ಲೆಂಡಿನ ಮಹಾರಾಣಿ ಮೇರಿಯವರು ತಮಗಾಗಿ ಅದನ್ನು ಕೊಂಡುಕೊಂಡರು. ಅದು ಇಂದಿಗೂ ಬ್ರಿಟಿಷ್ ಅರಸೊತ್ತಿಗೆಯ ಕೇಂದ್ರವಾದ ಬಕಿಂಗ್‌ಹ್ಯಾಮ್ ಅರಮನೆಯ ಗೋಡೆಯನ್ನು ಅಲಂಕರಿಸಿದೆ.

ಲಂಡನ್ನಿನ 'ಟೈಮ್ಸ್' ಪತ್ರಿಕೆ — Mr. Badiger understan what Western artists are trying for and he should be able to combine the two styles. (ಪಾಶ್ಚಿಮಾತ್ಯ ಕಲಾವಿದರು ಯಾವುದಕ್ಕಾಗಿ ಪ್ರಯತ್ನಿಸುತ್ತಿದ್ದಾರೆಂಬುದು ಬಡಿಗೇರರಿಗೆ ಚೆನ್ನಾಗಿ ತಿಳಿದಿದೆ: ಅವರು ಎರಡೂ ಶೈಲಿಗಳಲ್ಲಿ ಸಮನ್ವಯ ಸಾಧಿಸಬಲ್ಲರು.) ಎಂದು ಬರೆದರೆ, 'ಮಾರ್ನಿಂಗ್ ಪೋಸ್ಟ್' ಎಂಬ ಇನ್ನೊಂದು ಪ್ರಮುಖ ಪತ್ರಿಕೆ, Mr. Badiger has mingled all that is spiritual in Indian Art and much of the sensuous charm of Western form and colour into perfect harmony. (ಬಡಿಗೇರ ಅವರು ಅಧ್ಯಾತ್ಮಿಕ ಭಾವ ನಿರೂಪಣೆಯ ಭಾರತೀಯ ಚಿತ್ರಕಲೆಯನ್ನು ಹಾಗೂ ಪಾಶ್ಚಾತ್ಯ ಕಲೆಯಲ್ಲಿ ಒಡೆದು ಕಾಣುವ ರೂಪರೇಖೆ ಹಾಗೂ ವರ್ಣ ಕ್ರಮಗಳ ಸಂಯೋಜನೆಯನ್ನು ಸಾಮರಸ್ಯಪೂರ್ಣವಾಗಿ ಬೆರೆಸಿದ್ದಾರೆ.) ಎಂಬುದಾಗಿ ಬರೆಯಿತು.

ಮತ್ತೊಮ್ಮೆ ಲಂಡನ್ನಿನ ಸ್ಟೂಡೆಂಟ್ಸ್ ಲೈಬ್ರರಿಯಲ್ಲಿ ಪ್ರದರ್ಶಿತವಾದ ಇವರ ಚಿತ್ರಗಳ ಅನಾವರಣ ಮಾಡಲು ಪೂರ್ವ-ಪಶ್ಚಿಮಗಳ ಸಮನ್ವಯದ ಉಪಾಸಕ ಡಾ॥ ರಾಧಾಕೃಷ್ಣನ್ನರು ಬಂದಿದ್ದರು. ಅವರು ಬಡಿಗೇರ ಅವರ 'ಟೆಂಪ್ಟೇಶನ್ ಆಫ್ ಬುದ್ಧ' ಎಂಬ ತೈಲಚಿತ್ರವೊಂದನ್ನು ಕಂಡು ಬಹಳಷ್ಟು ಆನಂದಿಸಿದರು. 'ಮಾರ್ನಿಂಗ್ ಪೋಸ್ಟ್'—ಪತ್ರಿಕೆ ತನ್ನ ಸಂಪಾದಕೀಯದಲ್ಲಿ ಬಡಿಗೇರ ಅವರನ್ನು ಅಭಿನಂದಿಸಿ ಬರೆಯಿತು.

ಮರಳಿ ತಾಯ್ನಾಡಿಗೆ

ಲಂಡನ್ನನ್ನು ೧೯೩೧ ರಲ್ಲಿ ಬಿಟ್ಟು ಭಾರತಕ್ಕೆ ಮರಳುವ ಪೂರ್ವದಲ್ಲಿ ಬಡಿಗೇರ ಅವರು ಇಟಲಿ ಮತ್ತು ಫ್ರಾನ್ಸ್‌ಗಳಿಗೂ ಭೇಟಿ ಕೊಟ್ಟು ತಮ್ಮ ಚಿತ್ರ ಪ್ರದರ್ಶನಗಳನ್ನು ಯಶಸ್ವಿಯಾಗಿ ನಡೆಸಿದರು.

ಲಂಡನ್ನಿನಿಂದ ಭಾರತಕ್ಕೆ ಮರಳಿದ ಮೇಲೆ ಬಡಿಗೇರರು ಎಂಥ ಸಾಧನೆಯನ್ನು ಸಾಧಿಸುವರೋ ಕಾದುನೋಡಬೇಕೆಂಬ ಕುತೂಹಲದ ವಿಷಯವನ್ನು ಲಂಡನ್ನಿನ ಟೈಮ್ಸ್ ಪತ್ರಿಕೆ ಪ್ರಸ್ತಾಪಿಸಿತ್ತು. ಅಂತೆಯೇ ಭಾರತದವರೂ ಅವರ ಮುಂದಿನ ಕಲಾಸಾಧನೆಯನ್ನು ನೋಡಲು ಕುತೂಹಲ ತಾಳಿ ಕುಳಿತರು. ಬಡಿಗೇರರ ಕಲಾಕುಂಚ ಇನ್ನೂ ಅಗಾಧ ಚಿತ್ರಗಳನ್ನು ಸೃಷ್ಟಿಸಬಹುದೆಂಬ ರಹಸ್ಯ ಆ ಕುತೂಹಲದಲ್ಲಿ ಧ್ವನಿತವಾಗಿತ್ತು. ತಾಯ್ನಾಡಿಗೆ ಬಂದ ಕೆಲವೇ ದಿನಗಳಲ್ಲಿ ಅವರು ಕೈಗೊಂಡ ಮೊದಲ ಕಾರ್ಯವೆಂದರೆ ಮುಂಬಯಿಯಲ್ಲಿ ಹೊಸ ಮಾದರಿಯ ಕಲಾಶಾಲೆ 'ನೂತನ ಕಲಾಮಂದಿರ'ದ ಸ್ಥಾಪನೆ. ನವೆಂಬರ್ ೧೦, ೧೯೩೨ ರಲ್ಲಿ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಮಹಾಸ್ವಾಮಿ ಮೂರುಸಾವಿರ ಮಠ, ಹುಬ್ಬಳ್ಳಿ ಇವರ ಮತ್ತು 'ದಿ ಕರ್ನಾಟಕ ಆರ್ಟ್ ಸೊಸೈಟಿ'ಯ ಆಶ್ರಯದಿಂದ ಅದನ್ನು ಸ್ಥಾಪಿಸಿ ಅದರಲ್ಲಿ ಉಚ್ಚಕಲಾ ತರಗತಿಗಳನ್ನು ಆರಂಭಿಸಿದರು. ತಮ್ಮ ನಿರ್ದೇಶನದಲ್ಲಿಯೇ ನಡೆದ ಈ ನೂತನ ಕಲಾಮಂದಿರಕ್ಕೆ ಮುಂಬಯಿಯಲ್ಲಿ ಜಿ. ಡಿ. ಆರ್ಟನ್ನು ಮುಗಿಸಿದ ಕರ್ನಾಟಕದ ಇನ್ನೊಬ್ಬ ಹಿರಿಯ ಕಲಾವಿದ ಜಿ.ಎಸ್. ದಂಡಾವತಿ ಮಠರನ್ನು ಕಾರ್ಯದರ್ಶಿಯನ್ನಾಗಿಯೂ, ಸಹಶಿಕ್ಷಕರನ್ನಾಗಿಯೂ

ಮಾಡಿದರು. ಕಲಾವಿದ ಬಳಗದ ಸಂಘಟನೆಯೊಂದನ್ನು ಮಾಡಿ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ದಲ್ಲಿಯೇ ಮುಂದೆ ದೊಡ್ಡ ಕಲಾ ಪ್ರದರ್ಶನವೊಂದನ್ನು ಏರ್ಪಡಿಸಿದರು. ಅದೇ ಕಲಾಕೃತಿಗಳ ಪ್ರದರ್ಶನವನ್ನು ಬೆಳಗಾವಿಯಲ್ಲಿಯೂ ಏರ್ಪಡಿಸಿದರು. ಬಡಿಗೇರರ ಎಪ್ಪೋ ಕಲಾಕೃತಿಗಳನ್ನು ಸ್ಕೂಲ್ ಆಫ್ ಆರ್ಟ್ ಮ್ಯೂಜಿಯಂನ ನಿರ್ದೇಶಕರು ಕೊಂಡುಕೊಂಡರು. ಬೆಳಗಾಂವದ ಲಿಂಗರಾಜ ಕಾಲೇಜಿನ ಪ್ರಿನ್ಸಿಪಾಲ ಡಾ॥ ಎಸ್. ಸಿ. ನಂದೀಮಠರ ನೇತೃತ್ವದಲ್ಲಿ 'ಕರ್ನಾಟಕ ಆರ್ಟ್ ಸೊಸೈಟಿ' ಯೊಂದನ್ನು ಸಂಘಟಿಸಿ ಅದಕ್ಕೆ ನಂದೀಮಠರನ್ನೇ ಅಧ್ಯಕ್ಷರನ್ನಾಗಿ ಮಾಡಿ ಕಲಾ ಚಟುವಟಿಕೆಗಳನ್ನು ಆರಂಭಿಸಿದರು.

ಒಂದು ವರ್ಷದ ಅವಧಿಯೊಳಗೆ ಮುಂಬಯಿಯಲ್ಲಿ ಮೂರು ಸಲ, ದಿಲ್ಲಿ, ಕಲ್ಕತ್ತಾ ಹಾಗೂ ಬೆಳಗಾಂಗಳಲ್ಲಿ ಹೀಗೆ ಅನೇಕ ಕಲಾಪ್ರದರ್ಶನಗಳನ್ನು, ಕಲಾ ಸಂಘಟನೆಗಳನ್ನು ನಿರ್ಮಿಸಿದರು. ಆದರೆ ಭಾರತ ಅವರ ಸೇವೆಯನ್ನು ಬೇರೊಂದು ರೀತಿಯಲ್ಲಿ ಬಯಸಿತು. ೧೯೩೩ರಲ್ಲಿ ಬಡಿಗೇರರು ತಮ್ಮ ಕಲಾಗುರು ಸಾಲೋಮನ್ನರ ಸಲಹೆ ಹಾಗೂ ಸಹಾಯದಿಂದ ಇಡೀ ಮುಂಬಯಿ (ಇಂದು ಪಾಕಿಸ್ತಾನದಲ್ಲಿರುವ ಸಿಂಧ್ ಪ್ರಾಂತವನ್ನೂ ಸೇರಿ) ಪ್ರಾಂತಕ್ಕೇ ಡ್ರಾಯಿಂಗ್ ಮತ್ತು ಕ್ರಾಫ್ಟ್‌ದ ಇನ್‌ಸ್ಪೆಕ್ಟರ್ ಹುದ್ದೆಗೆ ನೇಮಕಗೊಂಡರು. ಕಲಾರಂಗದ ಇಂಥ ಉನ್ನತ ಹುದ್ದೆಯೊಂದನ್ನು ವಹಿಸಿಕೊಂಡವರಲ್ಲಿ ಬಡಿಗೇರರೇ ಪ್ರಥಮ ಭಾರತೀಯರು.

ವಿದ್ಯಾರ್ಥಿಗಳು ಅಪಾರ ಸಂಖ್ಯೆಯಿಂದ ಬೆಳೆಯುತ್ತಿದ್ದ 'ನೂತನ ಕಲಾ ಮಂದಿರ'ದ ನಿರ್ದೇಶಕತ್ವವನ್ನು ತ್ಯಜಿಸುವ ಸಮಯ ಬಂತು. ತಮ್ಮೊಡನೆ ಲಂಡನ್ನಿನಲ್ಲಿ ಕಲಿತ ವಿಶ್ವಾಸಿ ಸ್ನೇಹಿತರಾದ ವಿ. ಆರ್. ರಾವ್ ಅವರನ್ನು ಅದರ ಪ್ರಾಚಾರ್ಯರನ್ನಾಗಿ ನೇಮಿಸಿ ತಮ್ಮ ಸರಕಾರೀ ಅಧಿಕಾರವನ್ನು ೧೯೩೩ರಲ್ಲಿ ವಹಿಸಿಕೊಂಡರು. ವಿ. ಆರ್. ರಾವ್ ಅವರ ಕೆಲವರ್ಷಗಳ ಸೇವೆಯ ನಂತರ ಜಿ.ಎಸ್. ದಂಡಾವತಿಮಠರು ಆ ಕಲಾ ಮಂದಿರದ ಜವಾಬ್ದಾರಿಯನ್ನು ಹೊತ್ತು ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಗಳಿಸಿಕೊಂಡು ಪ್ರಸಿದ್ಧಿಗೆ ತಂದರು. ಇದರಿಂದಾಗಿ ತಮ್ಮ ಸ್ವಂತ ರಚನಾತ್ಮಕ ಕಲಾಕೃತಿಗಳ

ಮೂಲಕ ಇನ್ನೂ ಪ್ರಜ್ವಲಿಸಬೇಕಾಗಿದ್ದ ಬಡಿಗೇರ ಅವರ ಪ್ರತಿಭೆ ಮುಂದೆ ಬೇರೊಂದು ದಾರಿಯಲ್ಲಿ ಸಾಫಲ್ಯ ಕಂಡುಕೊಂಡಿತು. ಮುಂಬಯಿ ಸರಕಾರ ದಲ್ಲಿ ಉಚ್ಚ ಆಡಳಿತಗಾರನ ಹುದ್ದೆ ದೊರೆತ ನಂತರ ಅವರಿಗೆ ತಮ್ಮ ಚಿತ್ರ ಕಲಾ ಪ್ರತಿಭೆಯನ್ನು ಕಲಾಕೃತಿಗಳ ರೂಪದಲ್ಲಿ ತೋರಲು ಅಷ್ಟೊಂದು ಸಾಧ್ಯವಾಗಲಿಲ್ಲ. ಈ ದೃಷ್ಟಿಯಿಂದ ಆ ಮಟ್ಟಿಗೆ ಕಲಾ ಪ್ರಪಂಚಕ್ಕೆ ಅಪಾರ ಹಾನಿಯಾಯಿತೆಂದೇ ಹೇಳಬಹುದು. ಆದರೆ ಆ ಹುದ್ದೆಯ ಅಧಿಕಾರ ದಿಂದಲೂ ಬಡಿಗೇರರು ಕಲಾಪ್ರಪಂಚಕ್ಕೆ ಸಲ್ಲಿಸಿದ ಸೇವೆ ಕಡಿಮೆಯ ದೇನಲ್ಲ.

ಅಂದಿನ ಗೌಣ ಚಿತ್ರಕಲಾ ಶಿಕ್ಷಣ ಪದ್ಧತಿಯನ್ನು ಕಂಡು ಬಹು ನೊಂದು ಕೊಂಡ ಬಡಿಗೇರರು ಅದಕ್ಕೆ ಯೋಗ್ಯ ಸ್ಥಾನಮಾನವನ್ನು ನಿರ್ಮಿಸಲು ಯತ್ನಿಸಿದರು. ಎಳೆಯ ಕಲಾವಿದರನ್ನು ಬಾಲ್ಯದಲ್ಲಿಯೇ ಗುರುತಿಸಿ ಅವರಿಗೆ ಯೋಗ್ಯ ತರಬೇತಿಯನ್ನು ನೀಡುವಂತೆ ಸಲಹೆ ಮಾಡಿದರು. ಮುಂಬಯಿ ಪ್ರಾಂತದ ಕಲಾಶಿಕ್ಷಣ ಪದ್ಧತಿಯಲ್ಲಿನ ಅನೇಕ ಸುಧಾರಣೆಗಳನ್ನು ಹಾಗೂ ಬದಲಾವಣೆಗಳನ್ನೂ ಮಾಡಿದರು. ೧೯೪೭ರಲ್ಲಿ ಶ್ರೀಮತಿ ಹಂಸಾ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಸಮಿತಿಯೊಂದು ರಚಿತವಾಯಿತು. ಅದರ ಕಾರ್ಯದರ್ಶಿಯಾಗಿ ಬಡಿಗೇರರು ಆಯ್ಕೆಗೊಂಡರು. ಸರಕಾರಿ ಚಿತ್ರಕಲಾ ಪರೀಕ್ಷೆಗಳ ಸಂಘಟಕರಾಗಿ, ೧೯೫೦ರಲ್ಲಿ ಚಿತ್ರಕಲೆ ಮತ್ತು ಉಚ್ಚಕಲಾ ಪರೀಕ್ಷೆ ಗಳ ಕಾರ್ಯದರ್ಶಿಯಾಗಿ, ಪೇಪರ್‌ಸೆಟರ್‌ರಾಗಿ ಕಲಾ ಶಿಕ್ಷಣ ಸಲಹಾ ಸಮಿತಿಯ ಸದಸ್ಯರಾಗಿ ಹಾಗೂ ಇನ್ನೂ ಅನೇಕ ವಿವಿಧ ಸಮಿತಿಗಳ ಅಧ್ಯಕ್ಷ ರಾಗಿ, ಸದಸ್ಯರಾಗಿ, ಕಲಾರಂಗದ ಉನ್ನತಿಗೆ ಅವರು ಮಾಡಿದ ಸೇವೆ ಶ್ಲಾಘ ನೀಯ. ಕಲಾ ಪ್ರದರ್ಶನಗಳನ್ನು ಸಂಘಟಿಸುವವರಿಗೆ ಪ್ರೋತ್ಸಾಹ ನೀಡಿ ಇನ್ನೂ ಉನ್ನತ ಮಟ್ಟದ ಕಲಾ ಪ್ರದರ್ಶನಗಳನ್ನು ಏರ್ಪಡಿಸುವಂತೆ ವಿದ್ಯಾರ್ಥಿಗಳಲ್ಲಿ ಕಲಾಭಿರುಚಿ ಬೆಳೆಸುವಲ್ಲಿ ಅವರ ಪಾತ್ರ ಸಂಸ್ಮರಣೀಯ ವಾದುದು. ಮುಂಬಯಿ ಪ್ರಾಂತದ ಮೂಲೆ ಮೂಲೆಯಲ್ಲಿ ಇನ್‌ಸ್ಪೆಕ್ಷನ್ ಮಾಡುವ ಕಾರ್ಯದೊಂದಿಗೆ, ಕಲೆಯ ಬಗೆಗಿನ ಇನ್ನಿತರ ಕೆಲಸಗಳಲ್ಲೂ ಪಾಲ್ಗೊಂಡು ಕಲಾ ಬೆಳವಣಿಗೆಯನ್ನು ಅಭಿವೃದ್ಧಿಗೊಳಿಸಿದರು. ಸಿಂಧ್

ಭಾಗದ ಕೆಲವು ಕಡೆಗೆ ಇನ್‌ಸ್ಪೆಕ್ಷನ್‌ಗಾಗಿ ಅವರು ಒಂಟೆಯ ಮೇಲೂ ಕುಳಿತು ಕೊಂಡು ಹೋಗುವ ಪ್ರಸಂಗ ಬರುತ್ತಿತ್ತು.

ಬ್ರಿಟಿಷ್ ಆಡಳಿತ ಅವಧಿಯಲ್ಲಿ ಇಂಥ ಉನ್ನತ ಹುದ್ದೆಯ ಅಧಿಕಾರ ವಹಿಸಿಕೊಂಡು ಬಹು ಠೀವಿಯಿಂದ, ದರ್ಪದಿಂದ ಇರಬೇಕಾದ ಬಡಿಗೇರ ಅಹಂಕಾರದ ಆನೆಯನ್ನು ಮಾತ್ರ ಎಂದೂ ಏರಿಕೊಂಡು ಹೋಗಲಿಲ್ಲ. ಕಲೆಯ ನಿಲುವನ್ನರಿತುಕೊಂಡು ಇತರರನ್ನು ಸಹೃದಯತೆಯಿಂದ ಕಾಣುವ ಸದ್ಗುಣವನ್ನೂ ಹೊಂದಿಸಿಕೊಂಡು ಬದುಕಿದರು.

ಕರ್ನಾಟಕಕ್ಕೆ ಆಗಮನ

ತಮ್ಮನ್ನು ಹೆತ್ತನಾಡು ಕರ್ನಾಟಕವಾದರೂ ಹೊತ್ತು ಬೆಳೆಸಿದ ನಾಡಾದ ಮಹಾರಾಷ್ಟ್ರಕ್ಕೆ ಬಡಿಗೇರ ಅವ್ಯಾಹತವಾಗಿ ೨೮ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಆದರ ಜೊತೆಗೆ ಇನ್ನಿತರ ಕಲಾವಿದರೊಡನೆ ತಮ್ಮ ವಾತ್ಸಲ್ಯ ಮಯ ಸ್ನೇಹದಿಂದ ಒಕ್ಕೂಟ ರಚಿಸುವಲ್ಲಿ, ಕರ್ನಾಟಕದಿಂದ ಬಂದು ಚಿತ್ರ ಕಲೆಯನ್ನು ಕಲಿಯುವ ಬಡ ವಿದ್ಯಾರ್ಥಿಗಳನ್ನು ತಮ್ಮ ಮನೆಯಲ್ಲಿಟ್ಟು ಕೊಂಡು ಸಲಹುವ ಮೂಲಕ ಅಥವಾ ಆರ್ಥಿಕ ಸಹಾಯ ನೀಡುವುದರ ಮೂಲಕ ಎಷ್ಟೋ ಕಲಾವಿದ್ಯಾರ್ಥಿಗಳನ್ನು ಅವರು ಪೋಷಿಸಿದ್ದಾರೆ. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಪಾಲ್ಗೊಂಡ ಹಳ್ಳಿಕೇರಿ ಗುದ್ಲೆಪ್ಪ ರಂತಹ ಹಿರಿಯ ಹಾಗೂ ಇನ್ನಿತರ ಕೆಲವರಿಗೂ ಬಡಿಗೇರ ಪರೋಕ್ಷವಾಗಿ ಸಹಾಯ ನೀಡಿದ್ದಾರೆ.

೧೯೫೫ರಲ್ಲಿ ಬಡಿಗೇರ ತಮ್ಮ ಅಧಿಕಾರದಿಂದ ನಿವೃತ್ತಿ ಹೊಂದಿದರು. ಆದರೆ ಕಲಾಪ್ರವೃತ್ತಿಯಿಂದ, ಕಲಾಚಿಂತನೆಯಿಂದ ಮಾತ್ರ ತಮ್ಮ ಜೀವಿತದ ಕೊನೆಯವರೆಗೂ ಅವರು ನಿವೃತ್ತಿ ಹೊಂದಲಿಲ್ಲ. ನಂತರ ಕೆಲದಿನಗಳಲ್ಲೇ ದೇವಪ್ಪನವರು ಮಿಶ್ರಿಕೋಟೆಗೆ ಆಗಮಿಸಿದರು. ತಮ್ಮ ಮುಂದಿನ ಕಲಾ ಸೇವಾವಧಿಯನ್ನು ಧಾರವಾಡದಲ್ಲಿ ಕಳೆಯಬೇಕೆಂಬ ಆಶಯದಿಂದ ಸಾರಸ್ವತ ಪುರದಲ್ಲಿ 'ದೇವಿಕುಂಜ' ಎಂಬ ಮನೆಯೊಂದನ್ನು ನಿರ್ಮಿಸಿದರು. ಬಡಿಗೇರರ ಕಲಾ ಪ್ರತಿಭೆಯ ಬಗೆಗೆ ಕೇಳಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲ

ಪತಿ ರ್‍ಯಾಂಗ್ಲರ್ ಡಿ. ಸಿ. ಪಾವಟೆಯವರು ಧಾರವಾಡದಲ್ಲಿ ತಂಗುವ ಈ ಕಲಾವಿದನ ಸದುಪಯೋಗ ಪಡೆದುಕೊಳ್ಳಬೇಕೆಂಬ ಆಶಯ ವ್ಯಕ್ತಪಡಿಸಿದರು. ಅವರೊಡನೆ ಆ ಬಗೆಗೆ ಮಾತನಾಡಿ –'ಫ್ಯಾಕಲ್ಟೀಸ್ ಆಫ್ ಫೈನ್ ಆರ್ಟ್ಸ್' ವಿಭಾಗವೊಂದನ್ನು ಆರಂಭಿಸಲು ನಿರ್ಧರಿಸಿದರು. ಆದರೆ ಅನಿವಾರ್ಯ ಕಾರಣಗಳಿಂದ ಅದು ಆರಂಭವಾಗದೇ ಹೋಯಿತು. ಆ ವಿಭಾಗವೊಂದು ಆರಂಭವಾಗಿದ್ದಿದ್ದರೆ ಕರ್ನಾಟಕದ ಕಲೆಯ ಮಟ್ಟ ಇನ್ನೂ ಹೆಚ್ಚು ಸುಧಾರಿಸಬಹುದಿತ್ತೋ ಏನೋ.'

ಕರ್ನಾಟಕದಲ್ಲಿ ಅನುಕೂಲಕರ ವಾತಾವರಣ ಉಂಟಾಗದ್ದರಿಂದ ಹಾಗೂ ತಮ್ಮ ಮಕ್ಕಳೆಲ್ಲ ಮುಂಬಯಿಯಲ್ಲೇ ಅಭ್ಯಾಸ ಮಾಡುತ್ತಿದ್ದುದರಿಂದ ಅವರ ಉನ್ನತಿಗೋಸ್ಕರ ಬಡಿಗೇರ ಮತ್ತೆ ಮುಂಬೈಗೆ ತೆರಳಿದರು. ಧಾರವಾಡದಲ್ಲಿ ಕಟ್ಟಿಸಿದ ಮನೆಯನ್ನು ತಮ್ಮ ತಮ್ಮಂದಿರಾದ, ಈಗಿನ ಭಾರತೀಯ ಕಲಾ ಕೇಂದ್ರದ ನಿರ್ದೇಶಕರಾದ ನಿರಂಜನ ಬಡಿಗೇರ ಅವರಿಗೆ ಒಪ್ಪಿಸಿ ಹೋದರು.

ಸುಖಸಂಸಾರ

ದೇವಪ್ಪನವರದು ಸುಖದ ಸಂಸಾರ. ಸುಸಂಸ್ಕೃತ ವಾತಾವರಣದ ಮನೆತನ. ಹುಬ್ಬಳ್ಳಿ ಬಳಿ ಇರುವ ಸುಣಕಲ್ಲಿನ ಸುಸಂಸ್ಕೃತ ಮನೆತನಕ್ಕೆ ಸೇರಿದ ಶ್ರೀಮತಿ ದೇವಿಬಾಯಿ ಇವರ ಪತ್ನಿ. ಈ ದಂಪತಿಗಳಿಗೆ ಒಟ್ಟು ಮೂವರು ಗಂಡು ಮಕ್ಕಳು ಹಾಗೂ ಮೂವರು ಹೆಣ್ಣು ಮಕ್ಕಳು. ಎಲ್ಲರೂ ಶಿಕ್ಷಣವಂತರು, ಸುಸಂಸ್ಕೃತರು. ಹಿರಿಯ ಮಗ ಮಲ್ಲೇಶಪ್ಪ ಹದಿನಾಲ್ಕು ವರ್ಷ ಲಂಡನ್ನಿನಲ್ಲಿದ್ದು ಈಗ ನಾಸಿಕದ ಏಕ್ಸೆಲೋ ಕಂಪನಿಯಲ್ಲಿ ಚೀಫ್ ಮೆಕ್ಯಾನಿಕಲ್ ಇಂಜನಿಯರಾಗಿ ಸೇವೆ ಸಲ್ಲಿಸುತ್ತಿದ್ದರೆ, ಎರಡನೆಯ ಮಗ ಬಾಲಚಂದ್ರ ಏಳು ವರ್ಷ ಲಂಡನ್ನಿನಲ್ಲಿ ಅಭ್ಯಸಿಸಿ ಬಂದು ಮುಂಬಯಿಯಲ್ಲಿ ಕಮರ್ಷಿಯಲ್ ಆರ್ಟಿಸ್ಟ ಆಗಿ ಕೆಲಸ ಮಾಡುತ್ತಿದ್ದಾರೆ. ಕೊನೆಯ ಮಗ ವಿಜಯಕುಮಾರ್ ಆರೇಳು ವರ್ಷಗಳಿಂದ ಸ್ಕಾಟ್ಲೆಂಡಿನಲ್ಲಿ ಸಿವಿಲ್ ಇಂಜನಿಯರರಾಗಿ ಕೆಲಸ ಮಾಡುತ್ತಿದ್ದಾರೆ. ಮೂವರು ಹೆಣ್ಮಕ್ಕಳನ್ನೂ ಹುಬ್ಬಳ್ಳಿ, ಮುಂಬಯಿ ಹಾಗೂ ಪವಯುಗಳಲ್ಲಿ ಸುಸಂಸ್ಕೃತ ಮನೆತನಗಳಿಗೆ ಮದುವೆ ಮಾಡಿಕೊಟ್ಟಿದ್ದಾರೆ.

ಬಡಿಗೇರರು ತಮ್ಮ ಬಡತನದ ಬದುಕಿನುದ್ದಕ್ಕೂ ಅಪಾರ ಕಷ್ಟನಷ್ಟಗಳನ್ನನುಭವಿಸಿ, ಬಂದ ಎಡರು ತೊಡರುಗಳನ್ನು ಸ್ಪೋರ್ಟ್ಸ್‌ನಲ್ಲಿಯ ಹರ್ಡಲ್ಸ್ ದಾಟುವಂತೆ ದಾಟಿಬಂದರು. ಮುಂದೆ ತಮ್ಮ ಬದುಕನ್ನು ತಾವೇ ಕಲಾಮಯವನ್ನಾಗಿ, ಸುಂದರವನ್ನಾಗಿ ಸೃಷ್ಟಿಸಿಕೊಂಡರು. ಅಳುವನ್ನು ತಮಗಿಟ್ಟುಕೊಂಡು ಉಳಿದವರಿಗೆಲ್ಲ ಸುಖವನ್ನು ನೀಡಿದ ಶ್ರೀ ದೇವಪ್ಪ ಸೆಪ್ಟಂಬರ್ ೭, ೧೯೬೭ ರಂದು ಮಿದುಳಿನ ರಕ್ತಸ್ರಾವದಿಂದಾಗಿ ಈ ನಾಡಿನ ಜನತೆಯನ್ನು ಅಗಲಿ ಹೋದರು.

ತನ್ನ ತಾಯ್ನಾಡಿನ ಬಗೆಗೆ ಶುದ್ಧ ತಾಯ ವಾತ್ಸಲ್ಯವೇ ಅವರಿಗಿತ್ತು. ಅಂತೆಯೇ ಅವರ ಕಲಾಕೃತಿಗಳಲ್ಲೆಲ್ಲಾ ಕರ್ನಾಟಕದ ಭವ್ಯಪರಂಪರೆಯ ಬಗೆಗೆ, ಐತಿಹಾಸಿಕತೆಯನ್ನು, ಬಡತನವನ್ನು ಪ್ರತಿನಿಧಿಸುವಂತಹ ಕಲಾಕೃತಿಗಳು ಅವರಿಂದ ಪಡಿಮೂಡಿದವು. 'ಜಯಕರ್ನಾಟಕ' ಪತ್ರಿಕೆಯಲ್ಲಿ ಆಲೂರ ವೆಂಕಟರಾಯರು 'ಕನ್ನಡದ ಪ್ರತಿಭಾವಂತ, ಕಲಾತಪಸ್ವಿ' ಎಂದೆಲ್ಲ ಇವರ ಪ್ರತಿಭೆಯನ್ನು ಹೊಗಳಿ ಕೊಂಡಾಡಿದರು.

ಸದಾ ಕೈಯಲ್ಲಿ ಕುಂಚವನ್ನೇ ಹಿಡಿದುಕೊಂಡಿರುತ್ತಿದ್ದ ಬಡಿಗೇರ ಡ್ರಾಯಿಂಗ್ ಮತ್ತು ಕ್ರ್ಯಾಫ್ಟ್ ಇನ್‌ಸ್ಪೆಕ್ಟರ್ ಆಗುವವರೆಗಿನ ಸ್ವಲ್ಪೇ ಅವಧಿಯಲ್ಲಿ ಚಿತ್ರಗಳಲ್ಲಿ ಪ್ರಮುಖವಾದುವುಗಳೆಂದರೆ ದಿ. ಟೆಂಪ್ಟೇಶನ್ ಆಫ್ ಬುದ್ಧ, ತಿಲೋತ್ತಮೆ, ಲಂಬಾಣಿ ಹುಡುಗಿ, ಸಾವಿತ್ರಿ ಮತ್ತು ಸತ್ಯವಾನ, ನಳ-ದಮಯಂತಿ ಮತ್ತು ಬಹಳಷ್ಟು ಲೈಫ್ ಚಿತ್ರಗಳು. ಜಲವರ್ಣದಿಂದ ರಚಿಸಿದವುಗಳಲ್ಲಿ ಹೆಸರಿಸಬಹುದಾದ ಚಿತ್ರಗಳೆಂದರೆ ದಿ ಇವನಿಂಗ್ ಡಾನ್ಸ್ ಆಫ್ ಶಿವ, ಕುರುಡ ಮತ್ತು ಮೂಕ, ತಾಜಮಹಲ್, ತಾಜಿನ ಹಿಂದಿನ ಭಾಗ, ತಾಜಕ್ಕೆ ದಾರಿ, ವಿಜಯನಗರ. ಅಜಂತಾ ಎಲ್ಲೋರಾ ಚಿತ್ರಗಳ ಪುನರ್ ಪ್ರತಿಗಳು, ಬಾದಾಮಿ, ಪಟ್ಟದಕಲ್ಲಿನ ದೇವಸ್ಥಾನಗಳು, ಭಿಕ್ಷುಕ, ಪೂನಾದ ಖಂಡಾಲ್ ಹಾಗೂ ಇನ್ನೂ ಹಲವಾರು ನಿಸರ್ಗ ಚಿತ್ರಗಳಿವೆ. ಅಜಂತಾ ಶೈಲಿಯ ಚಿತ್ರಗಳು ತುಂಬ ಸುಂದರವಾದ ಕಲಾಕೃತಿಗಳಾಗಿವೆ. ಅಂತಹವುಗಳಲ್ಲಿ ಪ್ರಸ್ತುತ ಚಿತ್ರಗಳಲ್ಲಿರುವ 'ಏಂಜೆಲ್' ಎಂಬುದೂ ಒಂದು.

ಪೆನ್ಸಿಲ್ ಹಾಗೂ ಇಂಡಿಯನ್ ಇಂಕ್‌ನಿಂದಲೂ ಎಷ್ಟೋ ಸ್ಕೆಚ್‌ಗಳನ್ನು ಬಡಿಗೇರರು ರಚಿಸಿದ್ದಾರೆ. ಅಂತಹವುಗಳಲ್ಲಿ ಭಾರತೀಯ ಹುಡುಗಿ, ಗಜಪಕ್ಷಿ. ಅಪ್ಸರಾ ಹಾಗೂ ಬಹಳಷ್ಟು ಭಾವಚಿತ್ರಗಳೂ ಇವೆ. ತೈಲವರ್ಣ ಬಳಸಿ ಅನೇಕ ಭವನಗಳ ಹಾಗೂ ಅರಮನೆಗಳ ಗೋಡೆಗಳ ಮೇಲೂ ಚಿತ್ರ ತೆಗೆದಿದ್ದಾರೆ. ಅಂತಹ ಚಿತ್ರಗಳಲ್ಲಿ 'ಮಿಸ್ ಹಿಲ್ಡಾ ಲಾಲೋ' ಎಂಬುದೂ ಒಂದು. 'ಸಾವಿತ್ರಿ – ಸತ್ಯವಾನ್' ಎಂಬ ಇವರ ಚಿತ್ರವೊಂದನ್ನು ಧಾರವಾಡದ ಲಿಂಗರಾಜ ಪ್ರಿಂಟಿಂಗ್ ಪ್ರೆಸ್‌ನವರು ಆಗ ಕ್ಯಾಲೆಂಡರನ್ನಾಗಿ ತಯಾರಿಸಿ ಬಹಳಷ್ಟು ತಮ್ಮ ಹೆಸರನ್ನು ಗಳಿಸಿಕೊಂಡರು.

ಎಲ್ಲ ಚಿತ್ರಗಳ ಪೂರ್ತಿ ವಿವರಣೆಯನ್ನು ನೀಡಲಾಗದಿದ್ದರೂ ಎರಡು ಉತ್ತಮ ಎನಿಸಿದವುಗಳನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ವೀರಭದ್ರಾವತಾರ

ಇದರ ಮೂಲಚಿತ್ರ ೮"–೭" ಸೈಜಿನಲ್ಲಿದ್ದು ಜಲವರ್ಣ ಮಾಧ್ಯಮದಲ್ಲಿ ಚಿತ್ರಿಸಲಾಗಿದೆ. ಮೂಲತಃ ಚನ್ನಬಸವ ಪುರಾಣದಲ್ಲಿ ಬರುವ ಪ್ರಸಂಗವೊಂದರಿಂದ ಇದನ್ನು ಚಿತ್ರಿಸಲಾಗಿದ್ದು ನಂತರ ದೊಡ್ಡದನ್ನಾಗಿಯೂ ಚಿತ್ರಿಸಿ ಧಾರವಾಡದ ಲಿಂಗಾಯಿತ ಟೌನ್‌ಹಾಲ್‌ನಲ್ಲಿ ಈಗಲೂ ನೋಡಬಹುದಾಗಿದೆ. ಶ್ರೀ ಬಡಿಗೇರರು ನಿವೃತ್ತಿ ಹೊಂದಿದ ನಂತರ ಧಾರವಾಡಕ್ಕೆ ಬಂದಿದ್ದಾಗ ಇದು ರಚನೆಯಾಯಿತೆಂದು ತಿಳಿದುಬಂದಿದೆ.

ಇಲ್ಲಿ ಬಳಸಿರುವ ವರ್ಣ ಸಂಯೋಜನೆ ಆಕರ್ಷಕ. ವೀರಭದ್ರನ ಅವತಾರವನ್ನು ಅದು ಪ್ರತಿಬಿಂಬಿಸುತ್ತದೆ. ಎರಡು ಕೈಗಳಲ್ಲಿ ಖಡ್ಗ ಹಾಗೂ ಬಿಲ್ಲನ್ನು ಹಿಡಿದಿದ್ದರೆ, ಇನ್ನೆರಡು ಕೈಗಳಲ್ಲಿ ಶಿವನ ತ್ರಿಶೂಲ ಹಾಗೂ ಗ್ರಂಥವೊಂದನ್ನು ಇಡಲಾಗಿದೆ. ಮುಖದಲ್ಲಿ ಅಷ್ಟೇ ಗಂಭೀರತೆ ಮೂಡಿದ ಭಾವ, ತಿರುವಿದ ಮೀಸೆ, ರುದ್ರತೆಗೆ ಬಿದ್ದುಹೋದ ಕಿರೀಟ, ಸೊಂಟಕ್ಕೆ

ರುಂಡಗಳ ಮಾಲೆ, ಕೊರಳಿಗೆ ರುದ್ರಾಕ್ಷಿಸರ, ಲಿಂಗದಕಾಯಿ ಹಾಗೂ ಸುತ್ತು ಪರೆದ ನಾಗರಹಾವು ಮುಂತಾದುವುಗಳೆಲ್ಲ ರೌದ್ರತೆಯನ್ನು ಹೆಚ್ಚು ಭೀಕರಗೊಳಿಸುವಂತಿವೆ.

ಹಿನ್ನೆಲೆಯಲ್ಲಿ ಮಸುಕುಮಸುಕಾಗಿ ಕಾಣುವಂತೆ ಸೃಷ್ಟಿಕರ್ತನಾದ ಶಿವನು ಅದೃಶ್ಯಮಯ ರೀತಿಯಲ್ಲಿ ಬಾಗಿ ಕುತೂಹಲದಿಂದ ಇದನ್ನೆಲ್ಲ ಗಮನಿಸುವಂತೆ ಚಿತ್ರಿತವಾಗಿದೆ. ಶಿವನು ತನ್ನ ಕೊರಳ ಹಾವು, ಕೈಯಲ್ಲಿಯ ತ್ರಿಶೂಲ ವೀರಭದ್ರನಿಗೇ ಕೊಟ್ಟು ತಾನು ಬರೀ ಕೊರಳಿನಿಂದ ನಿಂತಿರುವದೂ ಇಲ್ಲಿ ಗಮನಾರ್ಹ. ಇದರ ಹಿನ್ನೆಲೆಯಾಗಿ ಬಳಸಿದ ತಿಳಿನೀಲಿ ಬಣ್ಣ, ಪರ್ವತಗಳ ಸಾಲು, ಸೂಕ್ಷ್ಮವಾಗಿ ರಚಿತವಾದ ಹಸಿರು ನಿಸರ್ಗ ಹಾಗೂ ಕಂದು ಬಣ್ಣದ ನೆಲದ ವರ್ಣಸಂಯೋಜನೆ ಹೆಚ್ಚು ಆಕರ್ಷಕವಾಗಿದೆ. ಇಲ್ಲಿ ಬಡಿಗೇರರ ಕಲ್ಪನಾ ಸಾಮರ್ಥ್ಯ ಹಾಗೂ ಕಲಾ ಪ್ರತಿಭೆಯ ಪ್ರೌಢತೆ ಎದ್ದು ಕಾಣುತ್ತದೆ. ವಸ್ತುಗಳಿಗೆ ಬಳಸಿದ ವಿವಿಧ ಬಣ್ಣಗಳ ಸಂಯೋಜನೆ ಎಲ್ಲೂ ಹೆಚ್ಚು ಕಡಿಮೆ ಎನಿಸದೆ ಸಮತೋಲವನ್ನು ಕಾಯ್ದುಕೊಂಡು ಹೋಗುವುದು ಮುಖ್ಯವಾದದ್ದು.

'ಏಂಜೆಲ್''

ಇದು ಎಲ್ಲೋರಾದ ಒಂದು ಪ್ರತಿಕೃತಿ. ಅಜಂತಾ ಶೈಲಿಯಲ್ಲಿದೆ, ಗುರು ಸೋಲೊಮನ್ನರು ಅಜಂತಾ ಶೈಲಿಯ ಚಿತ್ರಗಳನ್ನು ಚಿತ್ರಿಸಿಕೊಂಡು ಬರಲು ಬಡಿಗೇರರನ್ನು ಕಳಿಸಿದಾಗ ಇದು ನಿರ್ಮಿತವಾದದ್ದು. ದಿಲ್ಲಿಯ ಕೆಂಪು ಕೋಟೆಯಲ್ಲಿ ಈಗಲೂ ಇದು ನೋಡಲು ಸಿಗುತ್ತದೆ. ಸುಮಾರು ೩೦ ವರ್ಷಗಳ ಹಿಂದೆ ತೈಲವರ್ಣದಲ್ಲಿ ಚಿತ್ರಿತವಾದ ಈ ಕೃತಿ ಇತ್ತೀಚೆಗೆ ಸ್ವಲ್ಪ ಮಸಕುಮಸುಕಾಗಿದೆ.

ಈ ಚಿತ್ರ ಅಜಂತಾ ಶೈಲಿಯ ಪ್ರತಿಕೃತಿಯಾದರೂ ಇಲ್ಲಿ ಬಡಿಗೇರರ ಕುಂಚದ ಸೂಕ್ಷ್ಮ ಕೆಲಸವನ್ನು ಏಂಜೆಲ್‌ಳ ದೇಹರಚನಾ ವಿನ್ಯಾಸದಲ್ಲಿ

ಹಾಗೂ ಅಲಂಕಾರಿಕ ವಸ್ತುಗಳಿಗೆ ಬಳಸಿದ ವರ್ಣ ಕಲ್ಪನೆಯಲ್ಲಿ ಹೇಗೆ ಪ್ರಭುತ್ವ ಪಡೆದಿದೆ ಎಂಬುದನ್ನು ಗಮನಿಸಬಹುದು. ಕಪ್ಪೆಚಿಪ್ಪಿನಾಕಾರದ ಎರಡು ಬೃಹತ್ ರೆಕ್ಕೆಗಳ ಅಡಿಯಲ್ಲಿ ನಾಜೂಕಾದ ಬೆಳಗಿನ ಹುಳುವಿನಂತೆ ಆಕೆಯುದು ಕೋಮಲ ಶರೀರ. ತನ್ನ ಆಕರ್ಷಕ ಹಾಗೂ ಮೋಹಕ ಮುಖದಿಂದ ಸೌಂದರ್ಯದ ಮೆರಗನ್ನು ಪಡೆದ ಈ ದೇವತೆ ಮೆಲುವಾಗಿ ಮೇಲಕ್ಕೆ ಹಾರಲೆಂದೋ ಏನೋ ತನ್ನ ಎರಡೂ ಕೈಗಳನ್ನೂ ನೀಳ ಚಾಚಿ ದಂತೆ ಚಿತ್ರಿತವಾಗಿದೆ.

ಹೀಗೆ ಬಡಿಗೇರ ಅವರ ಯಾವುದೇ ವರ್ಣ ಚಿತ್ರದಲ್ಲಿಯು ವರ್ಣ ಸಂಯೋಜನೆ. ರೇಖಾಚಿತ್ರಗಳ ರೇಖಾ ಲಾವಣ್ಯತೆ, ರೇಖೆಗಳ ಮೇಲಿನ ಪ್ರಭುತ್ವ ಅಸಾಧಾರಣವಾದುದು. ತಮ್ಮ ಆಂತರಿಕ ಅನಿಸಿಕೆಗಳನ್ನು ಅಷ್ಟೇ ಅರ್ಥವತ್ತಾಗಿ, ಸುಸಂಬದ್ಧವಾಗಿ ಹೊಸ ಹೊಸ ಕಲಾಕೃತಿಗಳ ಮೂಲಕವೂ ತೋರಿಸಿದ ಅವರು ಒಬ್ಬ ಸೃಜನಶೀಲ ಕಲಾವಿದ. ವಿದೇಶದಲ್ಲಿದ್ದಾಗ ಚಿತ್ರಿಸಿದ ಅವರ ನ್ಯೂಡ್ (ಬೆತ್ತಲೆ) ಚಿತ್ರಗಳಂತೂ ಒಬ್ಬ ಸಿದ್ಧಹಸ್ತ ಪಾಶ್ಚಾತ್ಯ ಕಲಾವಿದನ ಕುಂಚದಿಂದಲೇ ಇಳಿದು ಬಂದಿವೆ ಎಂಬಂತೆ ಭಾಸ ವಾಗುತ್ತದೆ. ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಹಾಗೂ ಭಾವನಾತ್ಮಕ ಚಿತ್ರಗಳನ್ನು ಪರಂಪರಾಗತ ಹಾಗೂ ಆಧುನಿಕ ಶೈಲಿಯಲ್ಲಿ ಚಿತ್ರಿಸಿದ ಬಡಿಗೇರ ಅವರಿಗೆ ಪ್ರತಿಯೊಂದು ಕಲಾಕೃತಿಯಲ್ಲೂ ಅವರದೇ ಆದ ವಿಶಿಷ್ಟ ಶೈಲಿ, ಪ್ರತಿಭಾ ಮುದ್ರೆ ಇರುವದನ್ನು ಗಮನಿಸಬಹುದಾಗಿದೆ.

ಬಡಿಗೇರ, ಕಲಾ ಹೃದಯದ ಜೊತೆಗೆ ಮಾನವೀಯ ಅಂತಃ ಕರುಣೆಯುಳ್ಳ ಮಾನವರಾಗಿದ್ದರು. ಮೂಲತಃ ಯಾರೂ ಸೃಷ್ಟಿಸದ ಕಲೆಯನ್ನು ಇವರು ಸೃಷ್ಟಿಸಿ 'ಕಲಾಬ್ರಹ್ಮ' ರಾಗಲಿಲ್ಲ. ಎಲ್ಲೋ ದೂರ ಕುಳಿತು ಕಲೆಯ ಬಗೆಗೆ ತಪಸ್ಸುಮಾಡುವ 'ಕಲಾ ತಪಸ್ವಿ'ಯೂ ಆಗಲಿಲ್ಲ. ಕಲೆಯನ್ನು ಇವರೇ ಸ್ವತಃ ಹುಟ್ಟಿಸಿ "ಕಲಾ ಪಿತಾಮಹರು" ಎಂದೆನಿಸಿ

ಕೊಳ್ಳಲಿಲ್ಲ, ಕಾರಣ ಒಡಿಗೇರರು ನಿಸರ್ಗದಲ್ಲಿಯು ಸಹಜ ಕಲೆಯಲ್ಲೇ ದಿಸನಿತ್ಯ ಉಸಿರಾಡಿದ್ದರಿಂದ ಕಲಾಜೀವನದಲ್ಲೇ ಅವರು ಜೀವಿಸಿದರು.

ಅಂತೆಯೇ ಅಂತಹ ಯಾವ ಬಿರುದುಗಳನ್ನಾದರೂ ಅವರಿಗೆ ನೀಡುವದೆಂದರೆ ಅವರ ಘನತೆಯನ್ನೇ ಕಡಿಮೆಗೊಳಿಸುವಂತಾಗುವುದು.






2




3





5





7




8





10













D. G. BADIGER

Painting has a big slice in the glorious heritage of Indian Arts. Karnataka's contribution to this heritage is not insignificant. Just as mony outsiders have admired and drawn inspiration from our forms, our own artists have cultivated the different facets of arts of those lands, thus enriching the manifold variations of art as also their own equipment.

It was famed Kannada novelist Ta. Ra. Su. who has claimed that "while the aim of western art is exciting the senses, Indian art aims at sublimating the excited senses." It goes to the credit of artist D. G. Badiger who studied both these divergent attitudes to have blended the two to arrive at a style of his own.

D. G. Badiger is the first among Indian artists to wi a grade in Landon's Royal Academy of Arts. On retur he was appointed inspector of art and crafts for th Government of the earstwhile Bombay proviuce. Hi services in that capacity for nearly three decades ar note-worthy.

D.G. Badiger was born in Mishrakoti, a small hamle in Dharwar district. It was a poor carpenter family. His father, Goolappa was an honest individual who pursued the family profession sincerely. Sandalwood logs in his nimble hands got transformed to intended shapes and motifs like soft candles. He was as good a master in creating attracitve wooden chariots, palanquins, highly decorative doors, as in working with copper and brass metals. Devappa who was born in 1902 was his second son and had inherited his father's artistry.

Once Goolappa got a commission to create a wooden chariot for a renowed temple in Mysore. As he started working an it he was engrossed in its creative ramifica- tions. Goolappa who had barely entered the teens by then evinced a keen interest in the work. It became a routine for him to sit and watch uninterruptedly. The father who had observed his perspicacity, entrusted the task of preparing the lions for the adornment of the chariot to his son. The junior's initial foray into art was an instant success, the talent having come to light in his very first attempt. Thus the father became his first mentor too.

After completing his primary education in Mishrakot Devappa joined the new english school in Hubli fo

secondary education. It was the school's headmaster Torvi who recognized the future artist in this boy. Even while in his VIII standard Devappa passed the elimentary and inter grade art exams. Encouraged by this, Mr. Torvi and drawing teacher Muniyar prompted the boy to go to the J. J. School, Bombay, for further study in art. They also arranged for his stay in Bombay with Shahboji, a businessman. Later Sankar Dhadda also extended hospitality to the budding artist.

In Bombay, opportunities offered themselves for Devappa for the creative and evolutionary aspects of fine arts. In keeping with his inherent talent and lofty ideals he also enjoyed the blessing of the guidance of a master like Soloman Gladstone, the principal of the J.J. School.

In such an ideal atmosphere, coupled with the inherent talent, it took no time for the tiny plant to bloom into a big tree. His own sincere efforts also helped Devappa to maintain a high standard in all exams winning the coveted gold medal as he passed his diploma in 1927. At about the same time he also cornered several other medals like Mayo medal, Diploma medal, Dalicus medal, Governer's special medal, etc., The record was featured in the journal of J. J. School. After his studentship for six years, Devappa was made a "Fellow" of the institution in 1928. With that the honararium of Rs. 10 also got upgraded to Rs. 40 a month. Principal Soloman was doubly pleased with the progress achieved by Devappa.

Sometime later Soloman received a commission to paint a composition on the walls of the Viceregal Lodge

(The present Rastrapathi Bhavan). Having known the skill of Devappa, Soloman passed on the exacting task to his student. Devappa's artistry in this direction was appreciated by many eminent personalities of India and abroad.

The art and artists of the west had greately interested Badiger who had studied them both. Once when he was discusing allied matters with friends on the beach, he expressed his desire to go to England to study art in the renowned schools of art there. When he broached the subject to Soloman he not only welcomed the idea but offered to recommend him to the Royal Academy of Arts. The matter was also brought to the notice of Devappa's father. Goolappa was equally happy at the news. He even went to the extent of disposing of some of the family jewels to meet his son's expences. The journey materialized in 1929, the financial assistance from the Shirasangi Desai Trust also coming his way besides substantial contributions from the lawyer of the Haveri Mutt, Wali Shivappa of Hubli and Neeli Basappa. Thus Devappa became the first artist from India to study fine arts in England.

But in England Devappa was not able to get the admission to any art school straightaway. Getting an admission into such a school was a difficult proposition. To do so one was to have gained a standard besides the age limit. Devappa was beyond that age as his father had given a higher age while admitting him into the primary school. Meanwhile, Devappa occupied himself with odd jobs. Just then he happend to meet Sir William Rodenstein, Principal of the Royal Academy,

Devappa showed him some of his works, certificates as also the letter of Soloman Gladston. Sir William who was aware of the reputation of J. J. School was impressed by Devappa's credentials. He introduced the young artist to a few distinguished teachers of the Academy. Having come across a council consisting such eminent artists like Russel, Kelly, Jockson and Mornington, Devappa started wondering whether it would be possible for him to get a seat. Desperately he pleaded before them for admission. They were however impressed by Devappa's achievements and earnestness to pursue his studies. But his age was against him. In despair Badiger returned to his dwelling place. But when he received a call from the Academy in the next few days, he could not believe it. The Academy had set aside all adverse aspects of the question to admit Badiger though it could not grant him either scholarship or freeship. For Badiger it did not matter as he considered himself fortunate to have secured a seat that would enable him to study western art in its home land. He was determined to make good use of the opportunity. Just as he went about in respect of Indian Art, Devappa soon developed an attitude to see and appreciate contemporary art in the right perspective. After studying for two years, he secured the G. R. A. Londan in 1931. He was the first Indian to win such distiction.

Though Devappa was disappointed in not securing free studentship he was determined to compensate it in some other way. While in London he had got up a one man show with 300 works. That was in 1930 in

Bloomsbury Gallery. He had invited Mahathma Gandhi who was visiting London in connection with the Round Table Conference, to inaugurate it. As preoccupation prevented Gandhiji from attending the function he sent a message. Badiger however prevailed upon the renowned poet Rudyard Kippling to fill the gap. This only enhanced his prestige and he received wide publicity in the English Press.

The well-known English poet who had declared, "East is East and West is West; the twain shall never meet", was pleased with the works and described Badiger as a representative of eastren technique had not only developed the right attitude to Western' technique but had found a meeting ground between the two to arrive at a new mode. The poet who saw both the divine approach of the East and the romantic temperment of the West went on to correct his earlier statement by declaring that differences between East and the West were only superficial as one could see them resolved in these works."

It was heartening to recall that this artist who stole the hearts of the many western critics even while he was under 26, through his India Art exhibition, was a Kannadiga. An Indian Maharaja who was impressed with that exhibition prevailed on Badiger to paint on the walls of his palace in oil colours. In the one man show held in the India House, quite a few of his works got sold. His work entitled "Creation of Thilothama" received particular appreciation from all viewers. Queen Mary eventually purchased it and even today the painting adorns the ancient Royal collection in the Buckingham Palace.

While "The Times", London in an appreciation wrote "Mr. Badiger understands what western artists are trying for and that he should be able to combine the two styles" "Morning Post", another daily observed "Mr. Badiger has mingled all that is spiritual in Indian art and much of the sensuous charm of western form and colour into perfect harmony".

At yet another exhibition of Badiger's works in London's Students' Library, Dr. S. Radhakrishnan who was responsible in fusing the cultures of east and west was present to inaugurate it' He was greatly impressed by Badiger's composition "The Temptation of the Buddha". "Morning Post" paid special tribute to Badiger in an editorial.

Back to Motherland :

Before returning to India in 1931, Badiger visited Italy and France and held several exhibitions in those countries.

"The Times" had already predicted the great future that awaited Badiger in India. Likewise his compatriots back home were also looking forward to know his forays into the creative possibilities that were before him. It echoed the inquisitive inquiries of Badiger's creative faculties and the works that might result from them. The first task he undertook on returning to his mother country was the setting up of new type of art school named "Noothana Kalamandir". The school which started functioning on November 10, 1932 was set up under the auspicies of

Jagadguru Gurusiddeshwara Mahaswami of Hubli's Moorusavira Mutt and the Karnataka Art Society. The school had Badiger himself as the Director and another almnus of J. J. School G. S. Dandavati Mutt was made the Secretary and assistant master. At the same time by organising artists in Bombay Badiger got up a big exhibition in the J. J. School itself. The same exhibition was also held in Belgaum. The Director of the museum attached to the School of Art bought several works of Badiger. In Belgaum Dr. S. C. Nandimath, Principal of Lingaraj College helped in setting up a Karnataka Art Society. Dr. Nandimath was its first President.

In the course of that one year Badiger organised three exhibitions in Bombay, two each in Delhi, Calcutta and Belgaum. But the country sought his services in some other direction. In the year 1933 at the suggestion of art master Soloman, Badiger was appointed as the Inspector of Drawing and Crafts. The jurisdiction covered Sindh, now in Pakistan. Badiger was the first Indian to occupy such a prestigious position in the field of arts.

With this Noothana Kalamandir which was growing in student strength day by day, had to be deprived of the services of Badiger. He appointed his classmate in London, Mr. V. R. Rao, as the Principal before he took over the Government oppointment in 1933. V.R. Rao after a couple of years handed over that charge to Dandavati Mutt. Thereafter the latter discharged the responsibility

creditably, increasing the number of students and raising the status of the school to occupy a pre-eminent position in the country.

From then on the prospects of Badiger which should have flourished in a creative direction took a different stance. Having taken up a Government assignment, it was not feasible for Badiger to exhibit his talent in a direction. From this point of view it must be said creative that it was a great loss to Indian Art. But one should not forget Badiger's services in his official capacity compensated for this loss.

Badiger who was not very happy at the inferior status accorded to fine arts, tried hard to win for it its rightful place in the order of things. He arranged to recognize budding talent and impart training to them in fine arts. He introduced many reforms and changes in the teaching methods of fine arts. A committee for the purpose was formed under the chairmanship of Hansa Mehta in 1948. Badiger was it's Secretary. As organiser of art examinations (1950), as secretary for the fine arts examinations, as setter of papers, as member of arts advisory council and such other capacities, the services rendered by him are commendable. His role in enthusing students to improve the standard of their exhibitions and in organising them on a better scale was equally creditable. He also spread the awareness of art in the nooks and corners of the State while doing duty as inspector. He had occasion to even travel on camel back for this work in parts of Sindh.

Despite his high office carrying great influence, Badiger never rode a high horse nor behaved in a high handed manner. Instead, he developed a cultured attitude to understand and appreciate the finer points of art.

Thongh hailing from Karnataka, Badiger served Maharashtra uninterruptedly for over 28 years. Side by side he also extended a helping hand indirectly to people of the calibre of Guddleppa Hallikeri in his work for the integration of Karnataka.

Badiger retired from his post in 1959. But he did not retire as an artist till his last day. A few days after retirement he moved to Mishrakoti. With the intension of spending the rest of his artistic career in Dharwar, he built a house named "Devikunja" in Saraswatpur. Wrangler D. C. Pavate, the Vice-Chancellor of Karnataka University who had come to know about the reputation of Badiger as an artist, expressed a desire to make use of his services for the University. After a discussion with Badiger, Dr. Pavate decided to start a "Faculties of Fine Arts". But for some unforseen reason, it did not materialize. Had it done so, there is no doubt that the state of fine arts in Karnataka would have made great strides. But unfortunately for Karnataka the project was still born.

Because of the unfriendly atmosphere that prevailed in Karnataka as also because all his children were learning in Bombay, Badiger returned there to attend to their progress. He entrusted his house to his brother Niranjan

Badiger who is currently the Director of the Bharathiya Kala Kendra.

Badiger Family:

Badiger's was a happy family, it was cultured. He had married Devibai who hailed from an enlightened family in Sunkad, near Hubli. The couple had three sons and three daughters, all educated and cultured. Malleshappa, the eldest son studied in London for 14 years and is currently a mechanical engineer with a company known as Exello in Nasik, while Balachandra, the second son was in London as a student for seven years. He is at present a commercial artist in Bombay. Vijayakumar, the last son is a civil engineer in Scotland. The three daughters are all well settled in happy wedlock.

Right through his eventful life Badiger experienced poverty, but overcame each hurdle like a real sportsman. Later he carved his lifs in such a way as to make it as beautiful as it was artistic. Thus Badiger who reserved for himself the dark side of life distributed its happy outcomings to others and breathed his last on September 7, 1967 after a hemorrhage of the brain.

He had the greatest motherly offection for his motherland. All his paintings project the glorious heritage of Karnataka, its momentous history as also its poverty-stricken populace. Alur Venkatarao in "Jaya Karnataka" eulogised Badiger as "Karnataka's genius and Tapasvi".

Though Badiger who constantly sported a brush in his hand created all his works in the short span of time before he took up the post of Inspector of Arts and Crafts, they are innumerable. The more important ones he painted in the oil colour medium are "The Temptation of the Buddha", "Thilothama", "Lambani Girl", "Savitri and Sathyavan", "Nala-Damayanti", and many life studies. The better known works in water colours include "The Evening Dance of Siva", "The Blind and Dumb", "Taj-Mahal", "Way to the Taj", Panels of Vijaynagar and Ajanta, The Temples of Badami and Pattadakal and many landscapes. The works in the Ajanta tradition are admirable, the one entitled "Angel", being outstanding.

Badiger has made several sketches in pencil and ink too. He has also painted compositions in oil colour on walls of some Palaces and imposing buildings. One among them is entitled "Mis Hilda Lolo". His work "Savitri-Sathyavan" was used for a calendar by the Lingaraj Printing Press of Dharwar and earned a fortune for it.

Let us now consider two of his paintings.

Advent of Veerabhadra :

This is in water colour in 8 by 7 inches. It is a sequence from Chennabasava Purana and is on display in the Lingayat Town Hall in Dharwar. This was painted after his retirement when Badiger came down to Dharwar to settle down.

The colour scheme is attractive. Veerabhadra is with sword in one hand and a bow in another, while the other two hands sport the Trishul and a book each. The trim moustache, an imposing head-dress, garland of suklls around the girdle and that of Rudraksha adorning the neck, it is a dignified presence. The presence of a serpent adds to the stern outlook.

In the background is the blurred imagery of Lord Siva as though witnessing the drama inqusitively. It is significant that Siva should have surrendered the serpent and Trishul, his symbols, to his spiritual offspring. The lanqscape with its bright light blue sky bordering the mountain range, is a grand spectacle revealing Badiger's creative instinct and artistic maturity.

Angel :

This is in the hallowed Ajanta tradition. It is the result of art master Soloman's suggestion to Badiger to copy the murals of Ajanta. The work that was executed over 30 years ago is a little faded now.

Though it is a copy of an Ajanta painting, Badiger's delicate linear effects can be discerned in the delineation of Angel's graceful figure and the ornamentation that embellishes the portayal. Her's is a lithesome figure embeded between two wings in the shape of sea shells. With a delicate figure, attractive appearence and out-stretched hands, it appears as though she is ready to soar into the heavens.

Thus the mastery of Badiger's line is irrefutable in any of his works. He has depicted his imagery always in an effective and meaningful way. His nude studies especially can be easily compared with the best in the western tradition. Whether historic or mythological social or imaginary, he had a distinct individual style to depict the imagery both in the traditional and contemporary modes.

Badiger was essentially human, endowed as much with an artistic temparement as with a sympathatic disposition. True, he did not create a masterpiece, nor was he a mendicant dedicated to fine arts. Neither was he a father figure in the world of fine arts. Because he breathed the very essence of fine arts in his daily life. That is why the usual epithets to him would only be little his true greatness.

ಶೀರ್ಷಿಕೆಗಳು

368

KARNATAKA

REFERE

ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಕಟಣೆಗಳು

೧. **ಚಾಲುಕ್ಯ ವಾಸ್ತು ಮತ್ತು ಶಿಲ್ಪ**
ಡಾ॥ ಕೆ. ಶಿವರಾಮ ಕಾರಂತ
ಬೆಲೆ : ರೂ. ೫–೨೫

೨. **Temple Sculptures of India**
S. N. Swami
Price Rs. 15

೩. **ಕಲಾಗುರು ದಂಡಾವತಿಮಠ**
ಪ್ರೊ॥ ಬಿ. ಕೆ. ಹಿರೇಮಠ
ಬೆಲೆ : ರೂ. ೬

೪. **ಎಸ್. ಜಿ. ಪಾವಂಜೆ**
ಎಂ. ಟಿ. ವಿ. ಆಚಾರ್ಯ
ಬೆಲೆ : ರೂ. ೬

೫. **ಎಂ. ವಿ. ಮಿಣಜಗಿ**
ಗವೀಶ ಹಿರೇಮಠ
ಬೆಲೆ : ರೂ. ೬

೬. **ಕೆ. ವೆಂಕಟಪ್ಪ**
ಪಿ. ಆರ್. ತಿಪ್ಪೇಸ್ವಾಮಿ
ಬೆಲೆ : ರೂ. ೬

೭. **ಡಿ. ಜಿ. ಬಡಿಗೇರ**
ಅನ್ನದಾನಿ ಹಿರೇಮಠ
ಬೆಲೆ : ೬–೦೦

* *

ಬರಲಿರುವ ಪ್ರಕಟಣೆಗಳು

ಕರ್ನಾಟಕ ಕಲಾವಿದರ ಪರಿಚಯಾವಳಿ
(ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ)